ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ನವೆಂಬರ್ 2024 ಮಾಸ ಪತ್ರಿಕೆ

ಸಂಪುಟ/Volume : 47
ಸಂಚಿಕೆ/Issue : 02
ಪುಟ/Pages : 12
ಬೆಲೆ/Price : ₹ 15/–

Akhila Karnataka Shikshaka Samachar | November 2024 | Monthly




A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

"ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುವುದು" ಎನ್ನುವುದನ್ನು ಸದಾಕಾಲ ನೆನಪಿನಲ್ಲಿಟ್ಟುಕೊಳ್ಳಬೇಕಾದ ಮಹತ್ವದ ಅಂಶ. 1830ರ ಆಸುಪಾಸಿನಲ್ಲಿ ಯೋಜನಾಬದ್ಧವಾಗಿ ಕನ್ನಡ ನಾಡನ್ನು ಒಟ್ಟುಗೂಡಿಸಲು ಪ್ರಾರಂಭದ ಚಳುವಳಿಗಳಗೂ 1956ರ ವರೆಗೆ ವಿವಿಧ ಹಂತಗಳಲ್ಲಿ ಕನ್ನಡದ ಅಭಿಮಾನಗಳೂ, ಕನ್ನಡದ ಸಂಸ್ಕೃತಿ ಮತ್ತು ತನ್ನತನವನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಡಿದ ಎಲ್ಲ ಮಹನೀಯರನ್ನು ನಾವೆಲ್ಲ ಗೌರವಪೂರಕವಾಗಿ ಸ್ಮರಿಸಿ ಗೌರವಸೂಚಿಸುವ ತಿಂಗಳು ನವೆಂಬರ್ ತಿಂಗಳು.

ಕನ್ನಡ ನಾಡಿನ ಸುತ್ತಲು ಮರಾಠಿ, ಹಿಂದಿ, ಉರ್ದು, ತೆಲಗು, ತಮಿಳು, ಮಲೆಯಾಳಂ ಭಾಷೆಗಳ ಜೊತೆಯಲ್ಲಿ ಒಳ್ಳೆಯ ಬಾಂಧವ್ಯಗಳನ್ನು ಹೊಂದುತ್ತ ಇಂಗ್ಲೀಷಿನ ಅಪಾಯಕಾರಿ ಆಕ್ರಮಣವನ್ನು ಎದುರಿಸುತ್ತಿರುವ ಕನ್ನಡವನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಅಧಿಕೃತ ಶಾಸ್ತ್ರೀಯ ಭಾಷೆಯಾಗಿ ಕನ್ನಡ ಮಾನ್ಯತೆ ಪಡೆದದ್ದು ಅಷ್ಟೇ ಅಲ್ಲ ಭಾರತೀಯ ಉಳಿದೆಲ್ಲ ಭಾಷೆಗಳಗಿಂತ ಹೆಚ್ಚು ಕನ್ನಡ ಭಾಷೆಗೆ 'ಜ್ಞಾನಪೀಠ" ಪುರಸ್ಕಾರ ದೊರೆತಿರುವುದು ನಮ್ಮ ಭಾಷೆಯ ಮಹತ್ವವನ್ನು ಸಾರುತ್ತದೆ.

ಇಂದು ಕನ್ನಡ ನಾಡಿನ ಚದುರಿದ ಪಕ್ಕದ ಮಹಾರಾಷ್ಟ್ರ, ಕೇರಳ, ಆಂಧ್ರ, ತಮಿಳುನಾಡು, ಗೋವಾಗಳಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು ಇನ್ನು ಉಳಿದಿವೆ. ಅವುಗಳನ್ನು ನಮ್ಮ ಜೊತೆಯಲ್ಲಿ ಸೇರಿಸಿಕೊಳ್ಳುವ ಮತ್ತು ಕನ್ನಡನಾಡಿನಲ್ಲಿಯ ಪ್ರಾದೇಶಿಕ ಅಸಮಾನತೆಯನ್ನು ಕೊನೆಗಾಣಿಸುವುದು ನಮ್ಮೆಲ್ಲರ ಮೇಲಿರುವ ಪ್ರಮುಖ ಜವಾಬ್ದಾರಿ.

ಅಜ್ಞಾನದಿಂದ ಸುಜ್ಞಾನದೆಡೆಗೆ ತೆಗೆದುಕೊಂಡು ಹೋಗುವ ಹಬ್ಬ, ಕತ್ತಲು ತೊಲಗಿಸಿ ಬೆಳಕನ್ನು ಬೀರುವ ಹಬ್ಬ ದೀಪಾವಳಿ. ಕೆಟ್ಟದ್ದನ್ನು ಸಂಹಾರ ಮಾಡಿ, ಒಳ್ಳೆಯದನ್ನು ಪಾಲಿಸಿ ಪೋಷಿಸಲು ಪ್ರೇರೇಪಿಸುವ ಹಬ್ಬ ಈ ದೀಪಾವಳಿ. ನಮಗೆಲ್ಲ ಪ್ರಗತಿಯ ದಾರಿ ತೋರುವ ಹಬ್ಬವಾಗಿರಲಿ. ದೇಶದ ಪ್ರಗತಿಗೆ ನಮ್ಮೆಲ್ಲರ ಕಾಣಿಕೆ ಸಲ್ಲಲಿ ಎನ್ನುವದು ನಮ್ಮ ಆಶಯ.

ದೇಶದ ಶೌರ್ಯ, ಸಾಹಸದ ಪ್ರತೀಕವಾದ ಗುರುನಾನಕರು, ಸಮಾಜದಲ್ಲಿ ಸಾಮರಸ್ಯದ ಬೀಜವನ್ನು ಬಿತ್ತಿದ ದಾಸಶ್ರೇಷ್ಠ ಕನಕದಾಸರನ್ನು ನೆನಪಿಸಿಕೊಳ್ಳಲು ಈ ಈರ್ವರ ಜಯಂತಿಗಳನ್ನು ಆಚರಿಸುವುದರ ಮೂಲಕ ಮುಂದಿನ ಪೀಳಗೆಗೆ ಮಾದರಿ ಯಾಗೋಣ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಬೆಳಕಿನತ್ತ ನಡೆಯಲಿ ನಮ್ಮ ಪಯಣ – ರವೀಂದ್ರ ಎಸ್. ದೇಶಮುಖ್ 3
- ನಮ್ಮ ಕನ್ನಡದ ಸ್ವಾಭಿಮಾನವನ್ನು ಒಂದು ಬಾರಿ ಎಚ್ಚರಿಸಿಕೊಳ್ಳೋಣವೇ? – ಚಿದಾನಂದ ಆ ಕೇಸ್ಕರ ಪಾಟೀಲ 5
- ಹರಿದಾಸ ಸಂತ ಕನಕದಾಸ – ಲಕ್ಷ್ಮೀಸಿಂಗ್ ಬಿ. 7
- ಭಾರತೀಯ ಇತಿಹಾಸದ ವಿಕೃತೀಕರಣ 8
- ಪೂರ್ವಸೂರಿಗಳು – ನಂ. ನಾಗಲಕ್ಷ್ಮಿ 10
- ವರದಿಗಳು 11
- ಶಿಕ್ಷಣ ಸಚಿವರಿಗೆ ಮನವಿ 12

# ಬೆಳಕಿನತ್ತ ನಡೆಯಲಿ ನಮ್ಮ ಪಯಣ

**ಮನುಷ್ಯ ಇಂದು ಬಾಹ್ಯ, ಅಂತರಿಕ ಕತ್ತಲೆಗಳ ವಿರುದ್ಧ ಹೋರಾಡಬೇಕಿದೆ. ಸುಜ್ಞಾನ, ಸುನೀತಿ, ಸಮಾಧಾನ ಎಂಬ ಜ್ಯೋತಿಗಳು ನಮ್ಮ ಅಂತರಂಗದಲ್ಲಿ ನಿರಂತರವಾಗಿ ಬೆಳಗುತ್ತಿದ್ದರೆ, ಬದುಕಿನ ಪ್ರತಿದಿನವೂ ದೀಪಾವಳಿಯೇ. ಬನ್ನಿ, ಬೆಳಕಿನತ್ತ ಸಾಗಲು ಇನ್ನೇಕೆ ತಡ? ಅಂಧಕಾರ ವಿರುದ್ಧದ ಹೋರಾಟಕ್ಕೆ ಇದಕ್ಕಿಂತ ಒಳ್ಳೆಯ ಸಮಯ ಬೇಕೆ? ತಿಳಿಬೆಳಕು, ಆಹ್ಲಾದದ ಬೆಳಕು ನಮ್ಮ ಮನಸುಗಳನ್ನು ಸದಾ ಬೆಳಗಲಿ.**

**ರವೀಂದ್ರ ಎಸ್. ದೇಶಮುಖ್**
**(ಲೇಖಕರು ಪತ್ರಕರ್ತರು ಹಾಗೂ ಅಂಕಣಕಾರರು)**



ಜಡ್ಡುಗಟ್ಟಿರುವ ಮನಸುಗಳು, ದಣಿದಿರುವ ಕನಸುಗಳು, ಪುರುಸೊತ್ತು ಕೊಡದ ಕೆಲಸಗಳು, ನಿಟ್ಟುಸಿರು ಬಿಡುತ್ತಿರುವ ಬೆವರಹನಿಗಳು, ನಾಳೆಗಳ ಬಗ್ಗೆ ಕನವರಿಕೆಗಳು, ಎಲ್ಲ ಸರಿಹೋದೀತಾ ಎಂಬ ನಿರೀಕ್ಷೆಗಳು, ಅವರೆಲ್ಲ ಉದ್ಧಾರ ಆದ್ರು, ನಾವು ಹೀಂಗೇನಾ ಎಂಬ ಬೇಸರದ ಉದ್ಗಾರಗಳು, ಅದೃಷ್ಟಾನೇ ಇಲ್ಲ ಬಿಡ್ರಿ ಎಂಬ ಹಳಹಳಿಕೆಗಳು, ಹಂಚಿಕೊಳ್ಳಲಾಗದೆ ಇರಿಯುತ್ತಿರುವ ಭಾವನೆಗಳು, ಮೌನವೂ ಘಾಸಿ ಮಾಡುತ್ತಿರುವ ಕ್ಷಣಗಳು, ಮುಂದಿನ ದಾರಿ ಗೋಚರಿಸದ ಸಂದಿಗ್ಧತೆಗಳು, ಅವರನ್ನು ಬದಲು ಮಾಡ್ಲಾ, ನಾನೇ ಬದಲಾಗಲಾ ಎಂಬ ತಾಕಲಾಟಗಳು, ನಾನೇಕೆ ಸೋಲಲಿ ಎಂಬ ಅಹಂನ ದೊಂಬರಾಟಗಳು, ಸ್ವಾರ್ಥದ ಭಾರದಲ್ಲಿ ಕುಸಿಯುತ್ತಿರುವ ಸಂಬಂಧಗಳು, ದೂರವಾಗುತ್ತಿರುವ ಬಾಂಧವ್ಯಗಳು, ಕೆಲವೊಮ್ಮೆ ಎಲ್ಲ ಇದ್ದರೂ 'ಸಮಾಧಾನ' ಇಲ್ಲ ಎಂಬ ಕೊರಗುಗಳು, ಜೀವನ ಅಂದ್ರೆ ಇಷ್ಟೇನಾ ಎಂಬ ಪ್ರಶ್ನೆಗಳು...

ಕಣ್ಣು ಅರಳಿಸಿ ನೋಡಿದರೆ ಇವೆಲ್ಲ ನಮ್ಮ ಸುತ್ತಲೂ ಕಣ್ಣಿಗೆ ರಾಚುವ ಜೀವನ ಚಿತ್ರಶಾಲೆಯ ದೃಶ್ಯಗಳು. ಬದುಕು ಎಂದರೆ ಹಾಗೇ ಅಲ್ಲವೇ... ಅಂಧಕಾರದ ವಿರುದ್ಧ ನಿರಂತರ ಹೋರಾಟ, ಬೆಳಕಿಗಾಗಿ ಸತತ ಹುಡುಕಾಟ! ಅಷ್ಟಕ್ಕೂ ಬೆಳಕು ಎಂದರೆ ಅದು ಬರೀ ಪದವಲ್ಲ, ಭಾವನೆಯಲ್ಲ ಅದೊಂದು ದೊಡ್ಡ ಲೋಕ. ಭೌತಿಕ ಬದುಕಿನಲ್ಲೂ, ಅಧ್ಯಾತ್ಮ ಬದುಕಿನಲ್ಲೂ ಬೆಳಕು ಬೇಕೇ ಬೇಕು. ಬೆಳಕು ಎಂದರೆ ಚೈತನ್ಯ, ಕೌತುಕ, ಸಮೃದ್ಧಿ, ಭಾವಸಿರಿಯೂ ಹೌದು. ಬೆಳಕು ನೀಡುವ ಪ್ರಸನ್ನತೆ, ಸಾರ್ಥಕತೆ, ಸಂತೋಷ, ಸಂತೃಪ್ತಿ, ಸಮಾಧಾನವೇ ಅಸಾಧಾರಣ. ಆದರೆ, ಹೊರಗಿನ ಬೆಳಕು ಬರೀ ಕೃತಕತೆ, ತಾತ್ಕಾಲಿಕ. ಆಂತರ್ಯದ ಪ್ರಕಾಶಕ್ಕೆ ಸೌಂದರ್ಯವಿದೆ, ವ್ಯಕ್ತಿತ್ವವನ್ನು ಉತ್ಕರ್ಷಕ್ಕೆ ಕೊಂಡೊಯ್ಯುವ ಬಲವಿದೆ. ಬೆಳಕು ತರುವ ಪರಿವರ್ತನೆ ನೋಡಿ! ಸ್ವಾರ್ಥ ಕರಗಿಸಿ ಸಂವೇದನೆ ಅರಳಿಸುವ, ದುಃಖಗಳನ್ನು, ಲೌಕಿಕ ಜಂಜಾಟಗಳನ್ನು ಮರೆತು ಅಂತರಂಗದಲ್ಲಿ ಸಂತೋಷವನ್ನು ಆಹ್ವಾನಿಸುವ, ಬೇಕುಗಳಿಗೆ ಕಡಿವಾಣ ಹಾಕಿ ಪರರ ಹಿತದ ಬಗ್ಗೆಯೂ ಯೋಚಿಸುವ, ಬದುಕಿನ ದಾರಿ–ಗುರಿಯನ್ನು ಸರಿಮಾಡಿಕೊಂಡು ಮುಂದೆ ಸಾಗುವ ಸಂಭ್ರಮವನ್ನೂ ಬೆಳಕು ಸೃಷ್ಟಿ ಮಾಡುತ್ತದೆ.

ಅದಕ್ಕೆಂದೆ ನಮ್ಮಲ್ಲಿ ದೀಪಾವಳಿ ಬಂದಾಗಲೆಲ್ಲ ಭಾವಲೋಕ ಶೃಂಗಾರಗೊಳ್ಳುತ್ತದೆ, ಹೊಸ ನಿರೀಕ್ಷೆಗಳು, ಎಲ್ಲ ಬಗೆಯ ಅಂಧಕಾರಗಳನ್ನು ದೂರಮಾಡುವ ಸಂಕಲ್ಪಗಳು ಗರಿಗೆದರುತ್ತವೆ. ಕೆಡುಕೆಲ್ಲ ನಿವಾರಣೆಯಾಗಿ, ಸಾತ್ವಿಕತೆಯ ಉದಯವಾಗಬೇಕಾದರೆ ಕಾಲ ಪಕ್ವವಾಗಬೇಕು. ಹಲವು ಶಕ್ತಿಗಳ ಸಮ್ಮಿಲನವಾಗಬೇಕು. ಹಾಗಾಗಿಯೇ ದೀಪಾವಳಿ ಎಂದರೆ ಹಲವು ಒಳಿತುಗಳ ಸಂಗಮ. ಈ ಹಬ್ಬದೊಂದಿಗೆ ಬಾಲ್ಯದ ನೂರೆಂಟು ನೆನಪುಗಳಿವೆ, ಭಾವನೆಗಳ ಮಿತಾಯಿ ಇದೆ, ಚಕ್ಕುಲಿ, ಉಂಡೆ, ಚೂಡಾ, ಕರ್ಚಿಕಾಯಿಗಳ ಸ್ವಾದವಿದೆ. 'ನಾನಲ್ಲ ನಾವು' ಎಂದು ನೆನಪಿಸುವ ಭಾವವೈಶಾಲ್ಯವಿದೆ. ದೀಪಾವಳಿ ಎಂದರೆ ಕೌತುಕ, ಸಂಭ್ರಮಗಳ ಒಟ್ಟು ಮೊತ್ತ. ಆ ಬೆಳಕಿನಲ್ಲಿ ಮನಸುಗಳನ್ನು ತೊಳೆದುಬಿಡಬೇಕು, ಬೆಳಗಿ ಸಂಭ್ರಮಿಸಬೇಕು. ಜೀವನದ ದಾರಿಯನ್ನು ಪರಿಷ್ಕರಿಸಿಕೊಳ್ಳಬೇಕು.

ಐತಿಹಾಸಿಕವಾಗಿ ಒಮ್ಮೆ ಕಣ್ಣಾಡಿಸಿದರೂ ಇದರ ಮಹತ್ವ ಅರಿವಾಗುತ್ತದೆ. ಮರ್ಯಾದಾ ಪುರುಷೋತ್ತಮ ಭಗವಾನ್ ಶ್ರೀರಾಮಚಂದ್ರ ಹದಿನಾಲ್ಕು ವರ್ಷ ವನವಾಸ ಮಾಡಿದ್ದು ರಾಜಾ ದಶರಥನ ವಚನಪೂರ್ತಿಗೆ, ಕೈಕೇಯಿಯ ಹಠಕ್ಕೆ ಎಂಬುದು ಮೇಲ್ನೋಟಕ್ಕೆ ಗೋಚರಿಸುವ ಸಂಗತಿ. ಆದರೆ, ಅಧರ್ಮಿ ಶಕ್ತಿಗಳನ್ನು ನಾಶ ಮಾಡಿ, ಧರ್ಮ ಸಂಸ್ಥಾಪನೆಯ ವಿಜಯಧ್ವಜವನ್ನು ಹಾರಾಡಿಸುವುದು ನೈಜ ಉದ್ದೇಶವಾಗಿತ್ತು. ಅದಕ್ಕೆಂದೆ ಹದಿನಾಲ್ಕು ವರ್ಷದ ವನವಾಸದ ಅವಧಿಯಲ್ಲಿ ಶ್ರೀರಾಮನು ನಡೆಸಿದ ಯುದ್ಧಗಳು ಸಾವಿರಾರು. ಅಸುರರು, ರಾಕ್ಷಸರು, ಋಷಿಗಳಿಗೆ, ಸಜ್ಜನರಿಗೆ ಕಿರುಕುಳ ನೀಡುತ್ತಿದ್ದ ದುಷ್ಟಶಕ್ತಿಗಳು ಶ್ರೀರಾಮನ ಬಾಣಕ್ಕೆ ಬಲಿಯಾಗಿ, ಮುಕ್ತಿ ಪಡೆದರು. ಶಿಲೆಯಾಗಿದ್ದ ಅಹಲ್ಯೆ ಶಾಪಮುಕ್ತಳಾದಳು. ಪ್ರಾಂಜಲ ಭಕ್ತಿಯ ಶಬರಿ ಆದರ್ಶವಾದಳು. ಪ್ರಭುಸೇವೆಯ ಮೂಲಕವೇ ಆಂಜನೇಯ ಜಗದ್ವಂದ್ಯನಾದ. ಭರತನಂತೂ ತ್ಯಾಗದ ಮೌಲ್ಯವನ್ನೇ ಸ್ಥಾಪಿಸಿದ. ಈ ಹದಿನಾಲ್ಕು ವರ್ಷದ ಅವಧಿಯಲ್ಲಿ ಶ್ರೀರಾಮನು ಅನೇಕ ವಿಜಯಗಳನ್ನೇ ಕಂಡುಕೊಂಡರೂ, ಎಲ್ಲೂ ಒಂದಡಿ ಭೂಮಿಯನ್ನು ತನಗಾಗಿ ಪಡೆಯಲಿಲ್ಲ. ರಾವಣನನ್ನು ಕೊಂದ ಬಳಿಕ ಸ್ವರ್ಣನಗರಿ ಲಂಕಾಕ್ಕೆ ರಾವಣನ ಸೋದರ ವಿಭೀಷಣನನ್ನು ರಾಜನಾಗಿ ಮಾಡಿದ. 'ಲಂಕೆಯನ್ನು ರಾಜಧಾನಿ ಆಗಿಸಿಕೊಳ್ಳಬಹುದಲ್ಲವೇ?' ಎಂಬ ಪ್ರಶ್ನೆ ಶ್ರೀರಾಮನ ಸಮ್ಮುಖದಲ್ಲಿ ಬಂದಾಗ, 'ಜನ್ಮಭೂಮಿ ಸ್ವರ್ಗಕ್ಕಿಂತ ಮಿಗಿಲು' ಎಂದುಬಿಟ್ಟ. ಹಲವು ರಾಜರುಗಳಿಗೆ ನ್ಯಾಯಯುತವಾಗಿ ರಾಜ್ಯ ದೊರಕಿಸಿಕೊಟ್ಟು, ಸಾರ್ಥಕತೆ ಮೆರೆದ. ಅಧರ್ಮದ ನಾಶವಾದ ಮೇಲೆ ಧರ್ಮರಾಜ್ಯ ಸ್ಥಾಪನೆಯಾಗಬೇಕಿತ್ತಲ್ಲವೇ? ಆ ಮೂಲಕ ಗಾಢಾಂಧಕಾರ ಕಳೆದು ಧರ್ಮದ ಬೆಳಕು ಮೂಡಬೇಕಿತ್ತಲ್ಲವೇ? ಅದಕ್ಕಾಗಿ ಶ್ರೀರಾಮನು

**ಪುಟ 4 ಕ್ಕೆ ➢**

➢ ಪುಟ 3 ರಿಂದ.....

ಪಟ್ಟಾಭಿಷಿಕ್ತನಾಗಿದ್ದು ದೀಪಾವಳಿಯಂದು ಎಂಬ ಪ್ರತೀತಿ ಇದೆ. ಈಗಲೂ ಆದರ್ಶ ಆಡಳಿತ, ಪ್ರಜಾಸುಖ, ಜನಹಿತ, ನಿಜವಾದ ನೆಮ್ಮದಿ, ಸಮೃದ್ಧಿ, ಸಂತೃಪ್ತಿಗಳಿಗೆಲ್ಲ ರಾಮರಾಜ್ಯವೇ ಮಾದರಿ.

ಭೂಮಂಡಲವನ್ನೇ ನರಕವನ್ನಾಗಿ ಮಾಡುತ್ತೇನೆ ಎಂದು ಹೊರಟು, ದೇವಾದಿದೇವತೆಗಳನ್ನೂ ಕಾಡಿದ, ಇಂದ್ರ, ಅಷ್ಟ ದಿಕ್ಪಾಲಕರನ್ನು ಸೋಲಿಸಿ, ಅವರನ್ನು ಪದಚ್ಯುತಗೊಳಿಸಿದ, ಕ್ರೌರ್ಯದ ಪರಮಾವಧಿಯ ಲೋಕಪೀಡಕ ನರಕಾಸುರನನ್ನು ಭಗವಾನ್ ಶ್ರೀಕೃಷ್ಣನು ವಧಿಸಿದ್ದು ನರಕ ಚತುರ್ದಶಿಯಂದೇ. ಎಂಥ ದೊಡ್ಡ ಅಂಧಕಾರ ನಾಶವಾದ ದಿನವದು! ಬಾಲಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿದ ದಿನವೂ ಹೌದು. ಹೀಗೆ ದೀಪಾವಳಿ ಎಂದರೆ ಅಂಧಕಾರ ವಿರುದ್ಧದ ವಿಜಯ!

ಈಗಂತೂ ಅದೆಷ್ಟು ಬಗೆಯ ಕತ್ತಲೆಗಳ ವಿರುದ್ಧ ಹೋರಾಡಬೇಕಿದೆ. ಹೊರಗಿನ ಹೋರಾಟದ ಸ್ವರೂಪ ಒಂದಾದರೆ; ಒಳಗಡೆಯ ಹೋರಾಟದ ಆಯಾಮವೇ ಭಿನ್ನ. ಲೇಖನದ ಆರಂಭದಲ್ಲಿ ಪ್ರಸ್ತಾಪಿಸಿದಂತೆ ಮನುಷ್ಯ ತನ್ನ ವಿರುದ್ಧವೇ ಹೆಚ್ಚು ಹೋರಾಡುತ್ತಿದ್ದಾನೆ. ಏಕೆಂದರೆ, ಅತೀವ ಸ್ಪರ್ಧೆ, ತಾನು ಮಾತ್ರ ಚೆನ್ನಾಗಿ ಬದುಕಬೇಕೆಂಬ ಹಪಾಹಪಿ, ಸ್ವಾರ್ಥ, ಕೋಪ, ಮತ್ಸರ, ಅಹಂಕಾರ, ಒಂಟಿತನ, ಖಿನ್ನತೆ, ಬದುಕಿನ ಬಗ್ಗೆ ಸಂಕುಚಿತ ದೃಷ್ಟಿ... ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಹಾಗಾದರೆ, ಸಾರ್ಥಕ ಬದುಕಿನ ಪರಿಗಳು, ಮಾದರಿಗಳು ನಮ್ಮಲ್ಲಿ ಇಲ್ಲವೇ? ಖಂಡಿತವಾಗಿಯೂ ಇವೆ. ದುರದೃಷ್ಟವೆಂದರೆ ಸಮಾಜ ಅಂಥವರನ್ನು ಕೂಡ ಅನಾದರದಿಂದ ನೋಡುತ್ತಿದೆ. ಒಂದು ಉನ್ನತ ಧ್ಯೇಯದ ಸಾಕಾರಕ್ಕಾಗಿ ಬದುಕನ್ನು ಮೀಸಲಾಗಿಟ್ಟವರು, ಪರಿಸರ, ಶಿಕ್ಷಣ, ಆಹಾರ, ಆರೋಗ್ಯ, ಅಧ್ಯಾತ್ಮ ಸೇರಿದಂತೆ ಹಲವು ಕ್ಷೇತ್ರಗಳ ಅಭಿವೃದ್ಧಿಗಾಗಿ, ಅನಾಥರ, ಆಸರೆ ಇಲ್ಲದ ವೃದ್ಧರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವವರ ದೊಡ್ಡ ಪಡೆಯೇ ಇದೆ. ಆ ತೆರೆಮರೆಯ ಸಾಧಕರ ಅಂತಃಕರಣದ ಲೋಕ ಎಷ್ಟು ವಿಶಾಲವೆಂದರೆ, ಅಲ್ಲಿನ ಒಂದು ಸಣ್ಣ ಮೌಲ್ಯ ಕೂಡ ಶ್ರೀಸಾಮಾನ್ಯನ ಬದುಕನ್ನು ಸಾರ್ಥಕಗೊಳಿಸಬಲ್ಲದು. ಆದರೇನು ಮಾಡುವುದು? 'ಯಶಸ್ಸಿನ' ಮಾಪನ ಬದಲಾಗಿದೆ, 'ಯಾರು ದೊಡ್ಡವರು?' ಎಂಬುದು ಜ್ಞಾನ, ಸರಳತೆ, ಅವರ ಕೊಡುಗೆಗಳನ್ನು ಅವಲಂಬಿಸದೆ ಅಧಿಕಾರ, ಸಂಪತ್ತು, ವರ್ಚಸ್ಸನ್ನು ಅವಲಂಬಿಸಿದೆ. ಹಾಗಾಗಿಯೇ, ಹೊರಗಿನಿಂದ 'ಸಮೃದ್ಧಿ' ಇದ್ದರೂ, ಒಳಗಿನ ಬಡತನ ಅನೇಕರಿಗೆ ಕಾಡುತ್ತಿರುತ್ತದೆ.

ಮನುಷ್ಯನ ಧೋರಣೆಯನ್ನು ಬಿಂಬಿಸುವ ಕವನವೊಂದು (ಅಜ್ಞಾತರು ಬರೆದಿದ್ದು) ಇತ್ತೀಚೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ.

**'ಅವಶ್ಯಕತೆ ಮುಗಿದ ಮೇಲೆ ಎಲ್ಲವೂ ಭಾರವಯ್ಯ**
**ಊಟ ಮುಗಿದ ಮೇಲೆ ತಟ್ಟೆ ಭಾರ,**
**ಮಳೆ ನಿಂತ ಮೇಲೆ ಕೊಡೆ ಭಾರ**
**ಸಹಾಯ ಪಡೆದ ಮೇಲೆ ಸ್ನೇಹ ಭಾರ,**
**ಮೋಹ ಕಳೆದ ಮೇಲೆ ಪ್ರೀತಿ ಭಾರ**
**ಆಸ್ತಿ ಭಾಗವಾದ ಮೇಲೆ ಹೆತ್ತವರು ಭಾರ,**
**ಮಡದಿ ಬಂದ ಮೇಲೆ ಒಡಹುಟ್ಟಿದವರು ಭಾರ,**
**ಸಂಕಷ್ಟ ಕಳೆದ ಮೇಲೆ ಆ ದೇವರೇ ಭಾರ,**
**ಅವಶ್ಯಕತೆ ಮುಗಿದ ಮೇಲೆ ಎಲ್ಲವೂ ಭಾರವಯ್ಯ'**

ನಿಜಕ್ಕೂ ವಾಸ್ತವದ ಅನಾವರಣ. ಬದುಕಿನ ಹಾದಿ ಹೀಗಾದರೆ ಕತ್ತಲೆ ಕಳೆಯುವುದು ಹೇಗೆ? ಸಂಬಂಧ, ನಂಬಿಕೆಗಳು ಬಲಗೊಳ್ಳುವುದು ಹೇಗೆ? ಅವರವರ ಬದುಕಿಗೆ ಒಂದಿಷ್ಟು ಸ್ವಾರ್ಥ ಅನಿವಾರ್ಯ ಎಂಬುದೇನೋ ನಿಜ. ಆದರೆ, ಇದಕ್ಕೊಂದು ಲಕ್ಷ್ಮಣರೇಖೆ ಹಾಕಿಕೊಳ್ಳದಿದ್ದರೆ ಸ್ವಾರ್ಥದ ಕೋಟೆಯಲ್ಲಿ ಬಂದಿಯಾಗಿ ಬಿಡುತ್ತೇವೆ. ಎಲ್ಲವೂ ನಮಗಾಗಿ ಬೇಕು ಎಂದು ಹಪಹಪಿಸುತ್ತೇವೆ. ಬೆಳಕು ನೀಡುವ ಸಂದೇಶವೇ ಮುಂದೆ ಸಾಗು, ಖುಷಿಯನ್ನು ಹರಡು ಎಂದು. ಒಳ್ಳೆಯತನಕ್ಕೆ ಕೊರತೆಯಿಲ್ಲ, ಆ ಹಾದಿಯಲ್ಲಿ ಸಾಗುವವರು ಕಮ್ಮಿಯಾಗುತ್ತಿದ್ದಾರೆ ಅಷ್ಟೇ. ಇನ್ನು ಕೆಲವರು ತಮಗೆ ತಾವೇ ಶಿಕ್ಷೆ ಕೊಟ್ಟುಕೊಳ್ಳುತ್ತಿದ್ದಾರೆ. ನಮ್ಮನ್ನು ನಾವು ಪ್ರೀತಿಸಬೇಕೇ ಹೊರತು ದ್ವೇಷಿಸಬಾರದು. ಖಿನ್ನತೆಗೆ ಜಾರುವುದೆಂದರೆ ನಮ್ಮನ್ನು ನಾವೇ ಶಿಕ್ಷಿಸಿಕೊಂಡಂತೆ. ಖಿನ್ನತೆಯಿಂದ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಆಚೆ ಬರಲು ಯತ್ನಿಸಬೇಕು. ಇದಕ್ಕಾಗಿ, ಮೊದಲು ಜೀವನವನ್ನು ಪ್ರೀತಿಸಲು, ನಮ್ಮನ್ನು ನಾವು ಪ್ರೀತಿಸಲು ಆರಂಭಿಸಬೇಕು.

ಹೀಗೆ ನಿಜವಾದ ಕತ್ತಲು ಕಳೆಯುವ ಆಂದೋಲನ ಈ ದೀಪಾವಳಿಯಿಂದ ಆರಂಭವಾಗಲಿ. ಅದಕ್ಕಾಗಿ

- ಮಾನವೀಯತೆಗೆ ಮೊದಲ ಪ್ರಾಶಸ್ತ್ಯ ನೀಡೋಣ.
- ಜೀವನದಲ್ಲಿ ಈಗಿರುವ ಸ್ಥಿತಿಯನ್ನು ಒಪ್ಪಿಕೊಂಡು, ಮುಂದೆ ಸಾಗೋಣ.
- ಕತ್ತಲು ಕಳೆದ ಬಳಿಕ ಬೆಳಕು ಬಂದೇ ಬರುತ್ತದೆ ಎಂದು ಆಶಾವಾದಿಯಾಗೋಣ.
- ಎಲ್ಲ ದಿನಗಳೂ ಕಷ್ಟದ ದಿನಗಳಾಗಿರುವುದಿಲ್ಲ ಎಂಬ ವಾಸ್ತವ ಅರಿಯೋಣ.

ಪುಟ್ಟದೊಂದು ಹಣತೆ ಗಾಢಾಂಧಕಾರದ ವಿರುದ್ಧ ಹೋರಾಡಿ, ಗೆಲ್ಲಲು ಸಾಧ್ಯವಾದರೆ, ನಮಗೆ, ನಿಮಗೆ ಕೂಡ ಈ ಬೆಳಕಿನ ಪಯಣ ಆರಂಭಿಸಲು ಖಂಡಿತ ಸಾಧ್ಯ. ಅಲ್ಲವೇ? ●

---

## ಓದುಗರ ಪತ್ರ

ಶಿಕ್ಷಕ ಸಮಾಚಾರ ಅಕ್ಟೋಬರ್ 2024ರ ಮಾಸ ಪತ್ರಿಕೆಯಲ್ಲಿ ಒಡಮೂಡಿದ ಎಲ್ಲ ಲೇಖನಗಳು ಉತ್ಕೃಷ್ಟವಾಗಿವೆ. ಮಾನನೀಯ ಶ್ವೇತಾದ್ರಿ ನಿವೃತ್ತ ಶಿಕ್ಷಕರು ಬರೆದ 'ದೈಹಿಕ ಶ್ರಮ'ದ ಲೇಖನ ನನ್ನ ಮನಸ್ಸನ್ನು ಸೂರೆಗೊಂಡಿದೆ. ಎಲ್ಲ ಲೇಖಕರಿಗೂ ಹಾಗೂ ಸಂಪಾದಕ ಮಂಡಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. – ಶ್ರೀ ವಿ. ಎನ್. ಗೋಡಖಿಂಡಿ, ನಿವೃತ್ತ ಪ್ರಾಂಶುಪಾಲರು, ರಾಮದುರ್ಗ

ಬಹಳ ವರ್ಷಗಳಿಂದ ಶಿಕ್ಷಕ ಸಮಾಚಾರ ಪತ್ರಿಕೆಯನ್ನು ಓದುತ್ತಿದ್ದೇನೆ. ಸಂಘಟನೆಯಲ್ಲಿ ನಡೆಯುವ ಕಾರ್ಯಕ್ರಮಗಳ ವರದಿಗಳು ಮತ್ತು ಫೋಟೋಗಳನ್ನು ನಮಗೆಲ್ಲ ಉಣಬಡಿಸುತ್ತಿದ್ದೀರಿ. ಕೆಲವು ತಿಂಗಳಿಂದ ಪ್ರಕಟವಾಗುತ್ತಿರುವ ಪೂರ್ವ ಸೂರಿಗಳು ಶೀರ್ಷಿಕೆಯ ಈ ಬರಹವು ಶ್ರೀ ಕೃ ನರಹರಿಜಿ ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳನ್ನು ಸ್ಮರಿಸಿರುವುದನ್ನು ಓದಿ ಬಹಳ ಸಂತೋಷವಾಯಿತು. ಅಕ್ಟೋಬರ್ ಸಂಚಿಕೆಯಲ್ಲಿ ಗಾಂಧಿ– ಶಾಸ್ತ್ರಿ ಪ್ರಸ್ತುತತೆ ಹೆಸರಿನ ಲೇಖನವು ಓದುಗರ ಮನಮುಟ್ಟುವಂತಿತ್ತು. ದಸರೆಯ ಇತಿಹಾಸ ಮತ್ತು ಸಂದೇಶ ಶೀರ್ಷಿಕೆಯ ಲೇಖನವು ಉತ್ತಮ ಸಂದೇಶ ಮತ್ತು ಸಂತೋಷ ಕೊಟುವಂತಿದೆ. ಈ ಲೇಖನಗಳನ್ನು ಬರೆದ ಲೇಖಕರಿಗೆ ನನ್ನ ಅಭಿನಂದನೆಗಳನ್ನು ರವಾನಿಸಿ. ಧನ್ಯವಾದಗಳು. – ಶ್ರೀಮತಿ ದಾಕ್ಷಾಯಿಣಿ ಎಸ್.ಪಿ., ಮುಖ್ಯ ಶಿಕ್ಷಕಿ, ಬೆಂಗಳೂರು

# ನಮ್ಮ ಕನ್ನಡದ ಸ್ವಾಭಿಮಾನವನ್ನು ಒಂದು ಬಾರಿ ಎಚ್ಚರಿಸಿಕೊಳ್ಳೋಣವೇ?

**ಚಿದಾನಂದ ಆ ಕೇಸ್ಕರ ಪಾಟೀಲ**
ಎಂ.ಎ. ಇತಿಹಾಸ, ಎಂ.ಎ. ಸಮಾಜಶಾಸ್ತ್ರ
ಎಂ.ಎಸ್ಸಿ. ಭೂಗೋಳಶಾಸ್ತ್ರ.
ಅಧ್ಯಾಪಕರು –– ಬೆಳಗಾವಿ.
9449114285, chidapatil@gmail.com



ನಮಗೆಲ್ಲ ಬಡಿದೆಚ್ಚರಿಸುವ 'ಬಾರಿಸು ಕನ್ನಡ ಡಿಂಡಿಮವ' ಎನ್ನುವ ರಾಷ್ಟ್ರಕವಿ ಕುವೆಂಪು ಅವರ ಸಾಲುಗಳು ಹಾಗೂ 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಎನ್ನುವ ಹುಯಿಲಗೋಳ ನಾರಾಯಣರಾಯರ ಸಾಲುಗಳು ಇಂದಿಗೂ ಪ್ರಸ್ತುತವೆನಿಸಿವೆ. ಇಂದು ಏನನ್ನು ಬಡಿದೆಚ್ಚರಿಸಬೇಕು ಮತ್ತು ಚೆಲುವ ಕನ್ನಡ ನಾಡು ರಚನೆ ಹೇಗೆ ಎನ್ನುವುದನ್ನು ತಿಳಿಯುವ ಸಂದರ್ಭದಲ್ಲಿ ನಮ್ಮ ಕನ್ನಡ ನಾಡಿನ ರಚನೆಯ ಇತಿಹಾಸವನ್ನು ಒಂದು ಬಾರಿ ನಾವೆಲ್ಲ ಅವಲೋಕಿಸ ಬೇಕಲ್ಲವೇ?

ಶ್ರೀವಿಜಯ ಬರೆದ ಕವಿರಾಜ ಮಾರ್ಗದಲ್ಲಿ "ಕಾವೇರಿಯಿಂದ ಮಾ ಗೋದವರಿವರಮಿರ್ದ" ಎಂದು ಹೇಳಿ ಕನ್ನಡ ನಾಡಿನ ಸೀಮೆಯನ್ನು ಗೋದಾವರಿಯಿಂದ ಕಾವೇರಿಯವರೆಗೆ ಒಂದಾಗಿ ಇರುವುದೆಲ್ಲ ಕನ್ನಡ ನಾಡು ಎಂದು ಹೇಳಿದೆ. ಗಂಗ, ಕದಂಬ, ಚಾಲುಕ್ಯರ ಕಾಲದಲ್ಲಿ ಅಖಂಡವಾಗಿದ್ದ ನಾವು ಆದರೆ ಹೊಯ್ಸಳ ಹಾಗೂ ಸೇವುಣರ ಮಧ್ಯದಲ್ಲಿ ತುಂಗಭದ್ರೆಯಿಂದ ಉತ್ತರ–ದಕ್ಷಿಣವಾಗಿ ವಿಭಜಿಸಿ ಎರಡು ಭಾಗವಾದ ಕನ್ನಡಿಗರು, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ರಾಯಚೂರು ಬೀದರ್ ಕಲಬುರಗಿ ಬಹುಮನಿಯ ಪಾಲಾಗಿದ್ದವು. ನಂತರ ಇಂಗ್ಲಿಷರ ಕಾಲದಲ್ಲಿ ಮುಂಬೈ ಪ್ರಾಂತಕ್ಕೆ ಧಾರವಾಡ, ಉತ್ತರ ಕನ್ನಡ, ಬೆಳಗಾವಿ, ವಿಜಯಪುರ ಮದ್ರಾಸ್ ಪ್ರಾಂತಕ್ಕೆ, ದಕ್ಷಿಣ ಕನ್ನಡ, ಬಳ್ಳಾರಿ, ಹೈದರಾಬಾದ್ ಪ್ರಾಂತಕ್ಕೆ ಕಲಬುರಗಿ, ರಾಯಚೂರು, ಬೀದರ್ ಭಾಗಗಳು ಮತ್ತು ಬ್ರಿಟಿಷ್ ನೇರ ಅಧೀನದಲ್ಲಿ ಕೊಡಗು, ಉಳಿದುಕೊಂಡ ಕನ್ನಡಿಗರು ಚದುರಿಹೋದರು. ಚದುರಿದ ಕನ್ನಡಿಗರು ಆಯಾ ಪ್ರಾಂತ್ಯಗಳಲ್ಲಿ ಆಡಳಿತ ಭಾಷೆಯಾಗಿದ್ದ, ಮರಾಠಿ, ಉರ್ದು, ಇಂಗ್ಲೀಷ್ ಹಾಗೂ ಅನ್ಯಭಾಷೆಗಳನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು.

ಕನ್ನಡಿಗರ ಸಂಘಟನಾತ್ಮಕ ಹೋರಾಟ ಪ್ರಾರಂಭಿಸುವ ಪೂರ್ವದಲ್ಲಿಯೆ 1830ರಲ್ಲಿ ಸರ್ ವಾಲ್ಟರ್ ಎಲಿಯಲ್‌ರು ಧಾರವಾಡದಲ್ಲಿ ಕನ್ನಡ ಶಾಲೆಯ ಅವಶ್ಯಕತೆಯ ಬಗ್ಗೆ ಇಂಗ್ಲೀಷ್ ಸರ್ಕಾರಕ್ಕೆ ಪತ್ರ ಬರೆದಿದ್ದರು. ಈ ಕಾರ್ಯವನ್ನು ಮುಂದೆ ಡೆಪ್ಯುಟಿ ಚನ್ನಬಸಪ್ಪನವರು ಮುಂದುವರೆಸಿದರು. 1837ರಲ್ಲಿ ಜಾನ್.ಎ. ಡನ್ಲಪ್‌ನವರು ಬೆಳಗಾವಿಯಲ್ಲಿ ಕನ್ನಡ ಆಡಳಿತ ಭಾಷೆಯಾಗಿರಬೇಕೆಂದು ಅಂದಿನ ಧಾರವಾಡದ ಸಂದರ್ಶಕ ನ್ಯಾಯಾಂಗ ಕಮೀಷನರ ಅವರಿಗೆ 20–04–1937ರಲ್ಲಿ ಪತ್ರ ಬರೆದು ಆದೇಶ ಹೊರಡಿಸಿದ್ದರು. ಹೈದ್ರಾಬಾದಿನಲ್ಲಿ ಮರಾಠಿಯ ಜೊತೆಯಲ್ಲಿ ಉರ್ದು ಭಾಷೆಯ ಪ್ರಭಾವ ಅತಿಯಾಗಿದೆ ಎನ್ನುವುದನ್ನು ಅನೇಕರು ಬ್ರಿಟಿಷ್ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರು.

### ಕನ್ನಡಿಗರನ್ನು ಒಂದುಗೂಡಿಸುವ ಪ್ರಯತ್ನಗಳು ಆರಂಭ

ಚದುರಿದ ಕನ್ನಡಿಗರನ್ನು ಒಂದುಗೂಡಿಸುವುದು ಮತ್ತು ಕನ್ನಡ ಭಾಷೆಯ ಬೆಳವಣಿಗೆಯ ಪೂರಕ ಅಂಶಗಳನ್ನು ಪೋಷಿಸುವ ಸಂಘಟಿತ ಪ್ರಯತ್ನ ಮೊದಲಿನಿಂದ ಇದ್ದರೂ ವ್ಯವಸ್ಥಿತವಾಗಿ ಪ್ರಾರಂಭವಾದದ್ದು 30–07–1890ರಲ್ಲಿ ರಾ.ಹ ದೇಶಪಾಂಡೆಯವರ ನೇತೃತ್ವದಲ್ಲಿ ರಚನೆಯಾದ "ಕರ್ನಾಟಕ ವಿದ್ಯಾವರ್ಧಕ ಸಂಘ"ದಿಂದ. ನಂತರ 1915ರಲ್ಲಿ ಜನ್ಮ ತಾಳಿದ "ಕನ್ನಡ ಸಾಹಿತ್ಯ ಪರಿಷತ್" 1916ರಲ್ಲಿ ಉದಯಿಸಿದ "ಕರ್ನಾಟಕ ಸಭೆ" ಹಾಗೂ 1918ರಲ್ಲಿ ಹುಟ್ಟಿದ "ಕರ್ನಾಟಕ ರಾಜಕೀಯ ಪರಿಷತ್ತು" ಮತ್ತು ಉಳಿದೆಲ್ಲ ಕನ್ನಡಿಗರ ಪ್ರಯತ್ನಗಳು ಪ್ರಾಂತಗಳನ್ನು ರಚಿಸಲು ಭಾಷೆಯು ಸರಿಯಾದ ಮಾನದಂಡ ಹೀಗಾಗಿ ಕನ್ನಡಿಗರೆಲ್ಲರನ್ನು ಒಟ್ಟುಗೂಡಿಸಿ ಕನ್ನಡ ನಾಡಿನ ರಚನೆಯ ಅವಶ್ಯಕತೆಯನ್ನು ಅಂದಿನ ಭಾರತೀಯ ಕಾಂಗ್ರೆಸ್ಸಿನ ಅನೇಕ ಸಭೆ, ಸಮ್ಮೇಳನಗಳಲ್ಲಿ ಮನವರಿಕೆ ಮಾಡಲು ಪ್ರಯತ್ನಿಸಿದರು. ಬೆಳಗಾವಿಯಲ್ಲಿ 1924ರಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶದಲ್ಲಿ 'ಉದಯವಾಗಲಿ ಚಲುವ ಕನ್ನಡನಾಡು' ಎನ್ನುವ ಹುಯಿಲಗೋಳ ನಾರಾಯಣರಾಯರ ವಾಣಿ ಕನ್ನಡನಾಡಿನ ರಚನೆಯನ್ನು ಒತ್ತಿಹೇಳಿತು.

1924 ರಿಂದ 1946ರ ಮಧ್ಯದಲ್ಲಿ ನಡೆದ ಕನ್ನಡಿಗರನ್ನು ಒಂದು ಮಾಡುವ ಪ್ರಯತ್ನದ ಫಲವಾಗಿ ಅನೇಕ ಒತ್ತಾಯಗಳು ನಡೆದವು. 17–6–1948 ರಲ್ಲಿ ನಿವೃತ್ತ ನ್ಯಾಯಮೂರ್ತಿ ಎಸ್.ಕೆ. ಧರ್ ಅಧ್ಯಕ್ಷತೆಯಲ್ಲಿ ಆಯೋಗ ರಚನೆಯಾಯಿತು ಆದರೆ ಭಾಷಾವಾರು ಪ್ರಾಂತಗಳ ರಚನೆಯ ವಿಷಯದಲ್ಲಿ ಸ್ಪಷ್ಟತೆಗೆ ಬರಲಿಲ್ಲ. ಹಾಗೆ 01–04–1949ರಲ್ಲಿ ರಚನೆಯಾದ ಜೆ.ವಿ.ಪಿ ಸಮಿತಿಯು ಧರ್ ಆಯೋಗದ ಅಂಶಗಳನ್ನು ಎತ್ತಿ ಹಿಡಿದಿರುವುದರಿಂದಾಗಿ 20–05–1949ರಲ್ಲಿ ಕರ್ನಾಟಕ ಏಕೀಕರಣ ಮಹಾ ಸಮಿತಿಯ ಸಭೆಯಲ್ಲಿ "ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗದಿದ್ದರೆ, ಕನ್ನಡ ನಾಡಿನಲ್ಲೆಲ್ಲಾ ಅತೃಪ್ತಿ ಮತ್ತು ಅಸಂತೋಷಗಳುಂಟಾಗಿ ಜನತೆಯ ತಾಳ್ಮೆ ಕೊನೆಯ ಮಟ್ಟಕ್ಕೆ ಮುಟ್ಟುತ್ತದೆ" ಎನ್ನುವ ನಿರ್ಣಯ ಅಂಗೀಕರಿಸಿತು.

ಇದರ ಜೊತೆಯಲ್ಲಿಯೇ ನಾನಲ್ ನಗರ ಅಧಿವೇಶನ, ವಿಶ್ರಾಸಮಿತಿಯ ವರದಿ ಹಾಗೂ ಅದರಗುಂಚಿ ಶಂಕರಗೌಡ ಪಾಟೀಲ ಉಪವಾಸ ಸತ್ಯಾಗ್ರಹ ಮತ್ತು 19–04–1953ರಲ್ಲಿ ನಡೆದ ಹುಬ್ಬಳ್ಳಿ ಕನ್ನಡಿಗರ ಬಂಡಾಯ ಇವೆಲ್ಲವುಗಳೂ ಕನ್ನಡ ಪ್ರಾಂತ ರಚನೆಯ ತೀವ್ರತೆಯನ್ನು ಹೆಚ್ಚಿಸಿದವು. ಪರಿಣಾಮವಾಗಿ 30–09–1955ರಲ್ಲಿ ರಾಜ್ಯ ಪುನರ್‌ವಿಂಗಡಣಾ ಆಯೋಗ ವರದಿ ನೀಡಿತು. ಈ ಆಯೋಗದ ವರದಿಯಂತೆ ಅಂದಿನ ಪೂರ್ಣ ಮೈಸೂರು ರಾಜ್ಯ, ಹೈದ್ರಾಬಾದ್ ಕರ್ನಾಟಕ ಭಾಗಗಳು, ಮದ್ರಾಸ್ ಪ್ರಾಂತದ ಭಾಗಗಳು, ಬಾಂಬೆ ಪ್ರಾಂತದ ಭಾಗಗಳು ಮತ್ತು ಕೊಡಗು ಒಟ್ಟು ಸೇರಿ ವಿಶಾಲ ಮೈಸೂರು

ಪುಟ 6 ಕ್ಕೆ ➤

➢ ಪುಟ 5 ರಿಂದ.....

ರಾಜ್ಯ 01–11–1956ರಲ್ಲಿ ರಚನೆಯಾಗಿ ಮುಂದೆ 01–11–1973ರಲ್ಲಿ ಕರ್ನಾಟಕವೆಂದು ನಾಮಕರಣವಾಗಿ ರೂಪುಗೊಂಡಿತು.

ಇಷ್ಟಾದರೂ ಪೂರ್ಣ ಕನ್ನಡಿಗರು ಒಟ್ಟುಗೂಡಲು ಸಾಧ್ಯವಾಗಿಲ್ಲ. ಇಂದಿಗೂ ಮಹಾರಾಷ್ಟ್ರದಲ್ಲಿಯ ಸಾಂಗಲಿ, ಅಕ್ಕಲಕೋಟ, ಮಿರಜ್, ಜತ್ತ, ಲಾಥೂರ, ಆಂಧ್ರದ ಮಂತ್ರಾಲಯ, ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಅನೇಕ ಭಾಗಗಳು, ಕೇರಳದ ಅಚ್ಚಕನ್ನಡದ ಕಾಸರಗೋಡು ಹೀಗೆ ಅನೇಕ ಕನ್ನಡದ ನೆಲಗಳು ಸುತ್ತಲಿನ ರಾಜ್ಯಗಳಲ್ಲಿವೆ. ಅದಕ್ಕಾಗಿ ಪಾಟಸ್ಕರ ಆಯೋಗ ಮತ್ತು ಮಹಾಜನ್ ಆಯೋಗಗಳು ರಚನೆಯಾಗಿ ವರದಿ ನೀಡಿದರೂ ಅನೇಕ ವಿಧಗಳಿಂದ ವರದಿಗಳು ವರದಿಗಳಾಗಿ ಹಾಗೆ ಉಳಿದಿವೆ. ಕನ್ನಡಿಗರೆಲ್ಲ ಒಟ್ಟುಗೂಡುವ ಕಾಲ ಬಹುಬೇಗ ಬರಲಿ ಅದಕ್ಕಾಗಿ ನಮ್ಮ ಕನ್ನಡದ ಸ್ವಾಭಿಮಾನವನ್ನು ಮತ್ತೊಮ್ಮೆ ಎಚ್ಚರಿಸಿಕೊಳ್ಳುವ ಅವಶ್ಯಕತೆ ಇದೆ ಎಂದು ನಮಗೆಲ್ಲ ಅನಿಸಬೇಕಲ್ಲವೆ?

ನಾವೆಲ್ಲ 68ನೇ ಕನ್ನಡ ರಾಜ್ಯೋತ್ಸವ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಚದುರಿಹೋಗಿದ್ದ ಕನ್ನಡಿಗೆರಲ್ಲ ಬಹುತೇಕ ಒಂದಾಗಿದ್ದೇವೆ. ಈಗ ನಮ್ಮ ಮುಂದೆ ಇರುವ ಸವಾಲು ಕನ್ನಡ ನಾಡಿನ ಅಭಿವೃದ್ಧಿ, ನಾವೆಲ್ಲ ಒಂದು ಬಾರಿ ನಂಜುಂಡಪ್ಪನವರ ವರದಿಯನ್ನು ಅವಲೋಕಿಸಬೇಕು. ಕರ್ನಾಟಕ ಅಭಿವೃದ್ಧಿ, ಬೀದರ್‌ನಿಂದ ಚಾಮರಾಜನಗರದವರೆಗೆ ಕಾರವಾರದಿಂದ ಕೋಲಾರದವರೆಗಿನ ಎಲ್ಲ ಪ್ರದೇಶಗಳ ಅಭಿವೃದ್ಧಿಗೆ ಒತ್ತು ನೀಡುವ ಅವಶ್ಯಕತೆ ಇದೆ.

### ನೀರಾವರಿ ಯೋಜನೆಗಳು

ಕನ್ನಡ ನಾಡಿನ ಕನ್ನಂಬಾಡಿ ಅಣೆಕಟ್ಟು , ತುಂಗಭದ್ರಾ ಜಲಾಶಯ, ಕೃಷ್ಣಾಮೇಲ್ದಂಡೆ ಯೋಜನೆ, ಘಟಪ್ರಭ ಯೋಜನೆ, ನಾರಾಯಣಪುರ ಯೋಜನೆ, ಕಾರಂಜಿ ಯೋಜನೆ ಅಂತಹ ಪ್ರಮುಖ ಯೋಜನೆಗಳಲ್ಲಿದೆ. ಏತನೀರಾವರಿ ಯೋಜನೆಗಳು ಎತ್ತಿನಹೊಳೆಯ ತಿರುವು ಯೋಜನೆ, ಕಳಸಾ ಬಂಡೂರಿ, ವಾರಾಹಿ ಹೀಗೆ 163 ಯೋಜನೆಗಳು ಕಾರ್ಯಪ್ರವೃತ್ತರಾಗಿದ್ದರೂ, ಇಂದಿಗೂ ಕೋಲಾರ, ಚಾಮರಾಜನಗರ, ಚಿತ್ರದುರ್ಗ, ಬಳ್ಳಾರಿಯ ಕೆಲವು ಭಾಗಗಳು ಇನ್ನು ನೀರಾವರಿ ಯೋಜನೆಗಳೂ ಮರಿಚಿಕೆಯಾಗಿವೆ. ಕೃಷಿ ಪ್ರಧಾನವಾದ ಈ ಪ್ರದೇಶಗಳು ಇನ್ನು ಪ್ರಗತಿಯ ಕನಸನ್ನು ಕಾಣುತ್ತಿಲ್ಲ.

**ಶಿಕ್ಷಣ:** ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿ ಇನ್ನು ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ. ವಾಸ್ತವಿಕ ಸಾಕ್ಷರತೆಯ ಪ್ರಮಾಣ ಕಳವಳಕಾರಿಯಾಗಿದೆ.

**ಉದ್ಯೋಗ:** ದಕ್ಷಿಣ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಉದ್ಯೋಗಕ್ಕೆ ಅನುಕೂಲಕರ ವಾತಾವರಣ ಇದ್ದರೂ ಉತ್ತರ ಕರ್ನಾಟಕದ ದುಡಿಯುವ ಕೈಗಳಿಗೆ ಕೆಲಸ ಸಿಗುತ್ತಿಲ್ಲ. ಮಹಾರಾಷ್ಟ್ರದ ಬಾಂಬೆ ಇಲ್ಲವೇ ಗೋವಾದ ಪಣಜಿಗೆ ಉದ್ಯೋಗ ಅರಿಸಿ ಒಲಸೆ ಹೋಗುವವರ ಪ್ರಮಾಣ ಹೆಚ್ಚಿದೆ.

**ಕೈಗಾರಿಕೆಗಳ ವಿಕೇಂದ್ರಿಕರಣ:** ಕೈಗಾರಿಕೆಗಳು ಬೆಂಗಳೂರನ್ನೇ ಅವಲಂಬಿಸಿ ಬೆಳೆಯುತ್ತಿರುವುದು ಕಳವಳಕಾರಿಯಾಗಿದೆ. ಈಗಲೇ ಬೆಂಗಳೂರಿನ ಜನಸಂಖ್ಯೆ ಕೋಟಿ ದಾಟಿದೆ. ಹೀಗೆ ಮುಂದುವರೆದರೆ ಎಲ್ಲರಿಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಬಹುದೊಡ್ಡ ಸವಾಲಾಗುತ್ತದೆ, ಅಲ್ಲದೆ ಅನೇಕ ಸಮಸ್ಯೆಗಳಿಗೆ ಕಾರಣೀಭೂತವಾಗುತ್ತದೆ. ಹೀಗಾಗಿ ಕನ್ನಡ ನಾಡಿನ ಉಳಿದ ಪ್ರದೇಶಗಳಿಗೆ ಕೈಗಾರಿಕೆಗೆ ವಿಕೇಂದೀಕರಣಕ್ಕೆ ಮೂಲಭೂತ ಸೌಕರ್ಯ ಒದಗಿಸುವುದು ಅವಶ್ಯವಿದೆ. ಇದನ್ನೇ ಲಾಭವಾಗಿ ಮಾಡಿಕೊಂಡ ಪಕ್ಕ ರಾಜ್ಯಗಳು ನಮ್ಮ ಕೈಗಾರಿಕೆಗಳನ್ನು ಕಬಳಿಸುವುದನ್ನು ತಡೆಗಟ್ಟುವುದು ಒಂದು ಸವಾಲು.

### ಗ್ರಾಮೀಣ ಅಭಿವೃದ್ಧಿಗೆ ಒತ್ತು

ಕನ್ನಡ ನಾಡಿನ ಅಭಿವೃದ್ಧಿ, ಹಳ್ಳಿಗಳ ಅಭಿವೃದ್ಧಿಯಲ್ಲಿ ಅಡಗಿದೆ ಎನ್ನುವ ಸತ್ಯವನ್ನು ನಾವು ಅರಿತು ಯೋಜನೆಗಳನ್ನು ರೂಪಿಸಬೇಕು. ಹಳ್ಳಿಗಳು ಅದರಲ್ಲಿಯೂ ಮಧ್ಯ ಕರ್ನಾಟಕದ ಮತ್ತು ಕಲ್ಯಾಣ ಕರ್ನಾಟಕದಲ್ಲಿಯ ಗ್ರಾಮೀಣ ಪ್ರದೇಶಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಕರಾವಳಿ ಪ್ರದೇಶದ ಜನರ ಜೀವನ ಮಟ್ಟ ಹೆಚ್ಚಿಸುವ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚಿದೆ.

ಇವೆಲ್ಲವುಗಳ ಮಧ್ಯದಲ್ಲಿಯೂ ಕನ್ನಡ ನಾಡು ಅಭಿವೃದ್ಧಿಯತ್ತ ಸಾಗುತ್ತಿರುವುದು ಮುಂದಿನ ಪೀಳಿಗೆಗೆ ಆಶಾದಾಯಕವಾಗಿದೆ. ಶ್ರೀಮಂತ ಸಂಸ್ಕೃತಿಯನ್ನು ಹೊಂದಿದ ನಾವುಗಳೂ ಅದರ ರಕ್ಷಣೆಯ ಮತ್ತು ನೈಸರ್ಗಿಕ ಸಂಪನ್ಮೂಲಗಳು, ಸಂರಕ್ಷಣೆಯ ಹೊಣೆಗಾರಿಕೆಯೂ ನಮ್ಮದಾಗಿದೆ. ಅಕ್ಕ ಪಕ್ಕದ ರಾಜ್ಯಗಳನ್ನು ಗೌರವದಿಂದ ಕಾಣುವುದರ ಜೊತೆಗೆ ನಮ್ಮ ತನವನ್ನು ಉಳಿಸಿಕೊಂಡು, ರಕ್ಷಿಸಿಕೊಂಡು ಹೋಗಿದ್ದೇ ಆದಲ್ಲಿ ನಮ್ಮ ಹಿರಿಯರು ಶ್ರಮವಹಿಸಿ ಒಟ್ಟುಗೂಡಿಸಿದ ಕನ್ನಡ ನಾಡಿಗೆ ನಾವೆಲ್ಲ ಗೌರವ ಸಲ್ಲಿಸಿದಂತೆ ಆಗುತ್ತದೆ ಅಲ್ಲವೇ?

"ಜೈ ಭಾರತ ಮಾತೆ", ಜೈ ಭುವನೇಶ್ವರಿ" ●

# ಅಭಿನಂದನೆಗಳು



**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರಾದ ಶ್ರೀ ಚಂದ್ರಶೇಖರ ಪಾಟೀಲ ಯಳಸಂಗಿ ರವರು ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘದ ಆಳಂದ ತಾಲೂಕಿನ(ಕಲಬುರಗಿ ಜಿಲ್ಲೆ) ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿರುವದಕ್ಕೆ ಅಭಿನಂದನೆಗಳು**

- ನೀವು ಯಾವುದೇ ಕೆಲಸವನ್ನು ಮಾಡುವಾಗಲೂ ನಿಮ್ಮ ಮನಸ್ಸು ಹೃದಯ, ನಿಮ್ಮ ಸರ್ವಸ್ವವನ್ನೂ ಆ ಕೆಲಸಕ್ಕೆ ಕೊಡಿ.
- ಶಕ್ತಿಯೇ ಜೀವನ, ದುರ್ಬಲತೆಯೇ ಮರಣ; ಶಕ್ತಿಯೇ ಪರಮಾನಂದ, ಅಖಂಡಜೀವನ, ಅಮರತ್ವ. ದುರ್ಬಲತೆಯೇ ಅನವರತ ದುಃಖ, ತಳಮಳ, ದುರ್ಬಲತೆಯೇ ಮರಣ.
- ಶಿಕ್ಷಣವೆಂದರೆ ಮೊದಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು.

– ಸ್ವಾಮಿ ವಿವೇಕಾನಂದ

# ಹರಿದಾಸ ಸಂತ ಕನಕದಾಸ

**ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು, ಲೈಫ್‌ಕೋಚ್**
**ಸಂಪನ್ಮೂಲ ವ್ಯಕ್ತಿ (ಗಣಿತ), ಗಂಗಾನಗರ,**
**ಬೆಂಗಳೂರು –560 032**
**ದೂರವಾಣಿ ಸಂಖ್ಯೆ: 9980033636**



ಸರ್ವವ್ಯಾಪಿ ದೇವರ ಮೇಲಿನ ಭಕ್ತಿಯ ಮೂಲಕ ಸಾಧು ಸಂತರು ಭಾರತದ ಇತಿಹಾಸದಲ್ಲಿ ಪ್ರಭಾವಶಾಲಿಯಾಗಿದ್ದಾರೆ. ಹಿಂದಿನ ದಿನಮಾನಗಳಲ್ಲಿ ಸಂತರಿಗೆ ತಮ್ಮನ್ನು ತಾವು ಸಂತರೆಂದು ಗುರುತಿಸಿಕೊಳ್ಳಲು ಹಲವಾರು ಅಡೆತಡೆಗಳನ್ನು ಎದುರಿಸಬೇಕಾಗಿತ್ತು. ಜಾತಿ ಪದ್ಧತಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ದಿನಗಳಲ್ಲಿ ಜಾತಿ ವ್ಯವಸ್ಥೆಯನ್ನು ಮಾನ್ಯವೆಂದು ಒಪ್ಪಿಕೊಳ್ಳದಂತೆ ಸಮಾಜವನ್ನು ಪ್ರೋತ್ಸಾಹಿಸಿ, ತನ್ನ ಸಕಾರಾತ್ಮಕ ಕರ್ಮದ ಮೂಲಕ ಒಬ್ಬ ವ್ಯಕ್ತಿ ಶುದ್ಧನಾಗುತ್ತಾನೆ ಎಂದು ಒಪ್ಪಿಸಲು ಬಹಳ ಶ್ರಮ ಪಡಬೇಕಾಗಿತ್ತು. ವೇದಗಳನ್ನು ವ್ಯಾಖ್ಯಾನಿಸುವುದು ಮತ್ತು ಆಧ್ಯಾತ್ಮಿಕ ಜ್ಞಾನವನ್ನು ಗಳಿಸುವುದು ತನ್ನ ಹುಟ್ಟಿನಿಂದಲ್ಲ. ಆದರೆ ಕಾರ್ಯದಿಂದ ಎಂಬುದನ್ನು ತಿಳಿಸಿದ ಸಂತರೇ ಮುಂದೆ ದಾಸ ಶ್ರೇಷ್ಠರಾದರು.

ವರ್ಣಾಶ್ರಮದ ಧರ್ಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದು, 15 ಮತ್ತು 16ನೇ ಶತಮಾನ. ಅಂದರೆ 1509ರಿಂದ 1609ರವರೆಗೆ ಬದುಕಿದ್ದ ಹರಿದಾಸ ಸಂತ, ದಾರ್ಶನಿಕ ಮತ್ತು ದಾಸಶ್ರೇಷ್ಠ ಎಂದೂ ಕರೆಯಲ್ಪಡುವ 'ಕನಕದಾಸ'ರ ಜೀವನ ಪರಿಚಯ ಈ ಲೇಖನದ ಉದ್ದೇಶ.

## ದಾಸಶ್ರೇಷ್ಠ ಕನಕದಾಸರ ಜನನ ಮತ್ತು ಬಾಲ್ಯ

1509ರಲ್ಲಿ ಇಂದಿನ ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಬಾಡ ಎಂಬ ಗ್ರಾಮದಲ್ಲಿ ಬೀರಪ್ಪನಾಯಕ ಮತ್ತು ಬಚ್ಚಮ್ಮ ಎಂಬ ಕುರುಬ ದಂಪತಿಗಳಿಗೆ ಕುಲದೇವರಾದ ವೆಂಕಟೇಶ್ವರನ ಆಶೀರ್ವಾದದಿಂದ ಮಗನಾಗಿ ಜನಿಸಿದವರೇ ತಿಮ್ಮಪ್ಪನಾಯಕ.

ಬೀರಪ್ಪ ನಾಯಕ ವಿಜಯನಗರ ಸಾಮ್ರಾಜ್ಯದ ಧೀಮಂತ ದೊರೆ ನಿಷ್ಠಾವಂತ ದಂಡನಾಯಕ. ತನ್ನ ಮಗನೂ ತನ್ನ ಹಾಗೆಯೇ ಆಗಬೇಕೆಂಬ ಇಚ್ಛೆಯಿಂದ ತಿಮ್ಮಪ್ಪ ನಾಯಕನಿಗೆ ಬಾಲ್ಯದಿಂದಲೇ ವಿದ್ಯೆಯ ಜೊತೆ ಜೊತೆಗೆ ಯುದ್ಧ ಪರಿಣಿತಿಯನ್ನು ಕಲಿಸುತ್ತಿದ್ದರು. ಒಬ್ಬ ಧೀರ ನಾಯಕನಿಗೆ ಬೇಕಾದ ಸಕಲ ವಿದ್ಯಾಪಾರಂಗತರಾಗಿದ್ದ ದಿನಗಳಲ್ಲೇ ಹಠಾತ್ತಾಗಿ ಬೀರಪ್ಪನಾಯಕ ಅಕಾಲ ಮೃತ್ಯುವಾಯಿತು. ಇದರಿಂದ ದಿಕ್ಕೆಟ್ಟ ತಿಮ್ಮಪ್ಪನಾಯಕ ತಾಯಿಯ ಆಣತಿಯಂತೆ ತಂದೆಯ ಜವಾಬ್ದಾರಿಯನ್ನು ಹೊತ್ತು ದಂಡನಾಯಕನಾದನು.

## ತಿಮ್ಮಪ್ಪನಾಯಕ– ಕನಕನಾಯಕನಾದದ್ದು

ದಂಡನಾಯಕನಾದ ತಿಮ್ಮಪ್ಪನಾಯಕ ಗೆದ್ದು ಸಮರ್ಪಕವಾಗಿ ಆಡಳಿತ ನಡೆಸುತ್ತಿದ್ದ ಸಮಯದಲ್ಲಿ ಒಮ್ಮೆ ಅವನ ಕನಸಿನಲ್ಲಿ ವೆಂಕಟೇಶ್ವರನು ಬಂದು ತನಗೊಂದು ಗುಡಿ ಕಟ್ಟಿಸಬೇಕೆಂದು ಕೇಳಿದಂತಾಯಿತು. ಅದರಂತೆ ಗುಡಿ ಕಟ್ಟಲು ಪ್ರಾರಂಭಮಾಡಿದಾಗ ಅವನಿಗೆ ಭೂಮಿಯ ಕೆಳಗೆ ಏಳು ಚಿನ್ನದ ಕೊಪ್ಪರಿಗೆಗಳು ಸಿಕ್ಕಿದವು. ಅಂದಿನಿಂದ ಜನರೆಲ್ಲರೂ ತಿಮ್ಮಪ್ಪನಾಯಕನನ್ನು ಕನಕನಾಯಕ ಎಂದು ಕರೆಯತೊಡಗಿದರು. 'ಕನಕ' ಎಂದರೆ ಚಿನ್ನ ಎಂದು ಅರ್ಥ. ಕನಕನಾಯಕ ಉತ್ತಮ ಶಿಕ್ಷಣವನ್ನು ಹೊಂದಿ ಸಮಾಜವನ್ನು ಬಹಳ ವಿವರವಾಗಿ ಪರಿಶೀಲಿಸಲು ಸಮರ್ಥನಾಗಿದ್ದನು. ಹೀಗೆ ಸುವ್ಯವಸ್ಥೆಯಿಂದ ಆಡಳಿತವನ್ನು ನಿಭಾಯಿಸುತ್ತಾ ಇರುವಾಗ ಅನಿರೀಕ್ಷಿತ ಯುದ್ಧವೊಂದರಲ್ಲಿ ಭಾಗಿಯಾಗಬೇಕಾಯಿತು. ಪರಾಕ್ರಮದಿಂದ ಹೋರಾಡಿದರೂ ಕೂಡ ಯುದ್ಧದಲ್ಲಿ ಸೋಲುಂಟಾಯಿತು. ಮಾರಣಾಂತಿಕವಾಗಿ ಗಾಯಗೊಂಡಿದ್ದ ಕನಕನಾಯಕ ಚಮತ್ಕಾರವೆಂಬಂತೆ ಬದುಕುಳಿದನು ನಂತರ ನಡೆದದ್ದೆಲ್ಲವೂ ಅದ್ಭುತವೇ.

## ಕನಕನಾಯಕ– ಕನಕದಾಸರಾಗಿದ್ದು

ಚಮತ್ಕಾರದಿಂದ ಬದುಕುಳಿದ ಕನಕನಾಯಕನಿಗೆ ವೈರಾಗ್ಯ ಉಂಟಾಗಿ ತನ್ನ ಸ್ಥಾನಮಾನಗಳನ್ನೆಲ್ಲಾ ಬಿಟ್ಟು ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸಲು ಪ್ರೇರಣೆಯಾಗಿ ಅದರಂತೆ ಕಾಗಿನೆಲೆಗೆ ಹೋಗಿ ತಮ್ಮ ಸ್ವಾಮಿಯಾದ ಆದಿಕೇಶವನನ್ನು ಸ್ಥಾಪಿಸಿ ತನು–ಮನದಿಂದ ಆರಾಧಿಸತೊಡಗಿದರು ಮತ್ತು ಗುರುವಿನ ಮಾರ್ಗದರ್ಶನಕ್ಕಾಗಿ, ಹರಿದಾಸ ಸಂತರಾದ ದ್ವೈತ ವೇದಾಂತದ ವೈಷ್ಣವ ತತ್ವಜ್ಞಾನಿಯಾದ ಶ್ರೀವ್ಯಾಸತೀರ್ಥರ ಶಿಷ್ಯತ್ವವನ್ನು ಸ್ವೀಕರಿಸಿ ಕನಕನಾಯಕನಿಂದ ಕನಕದಾಸರಾದರು, ಹರಿದಾಸರೆನಿಸಿಕೊಂಡರು.

ದಾಸಪರಂಪರೆಯಲ್ಲಿ ಬರುವ 250ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರು ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನೆಗಾರರು, ಪುರಂದರದಾಸರ ಸಮಕಾಲೀನರಾದ ಕನಕದಾಸರು ಅವರಿಗಿಂತ ವಯಸ್ಸಿನಲ್ಲಿ ಚಿಕ್ಕವರು ಆದರೆ ಇವರಿಬ್ಬರೂ ಕರ್ನಾಟಕ ಸಂಗೀತ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಪ್ರಸಿದ್ದರು. ಕರ್ನಾಟಕ ಸಂಗೀತದ ಸಂಯೋಜನೆಗಳಿಗೆ ಹೆಸರುವಾಸಿಯಾದರು.

## ಜಾತ್ಯಾತೀತ ಕನಕದಾಸರು

ಕನಕದಾಸರು ಎಲ್ಲಾ ಧರ್ಮಗಳ ಬಗ್ಗೆ ನ್ಯಾಯಯುತ ದೃಷ್ಟಿಕೋನವನ್ನು ಹೊಂದಿದ್ದರು. ಅಂದಿನ ಸಾಮಾಜಿಕ ಜಾತಿ ವ್ಯವಸ್ಥೆಯ ವಿರುದ್ಧ ಸಮರ ಸಾರಿದವರು. ಸಾಮಾಜಿಕ ಮಡಿವಂತಿಕೆಯನ್ನು ಕುರಿತು ಅವರು ತಮ್ಮ ಕೀರ್ತನೆಗಳಲ್ಲಿ ವಿಡಂಬಿಸಿದ್ದಾರೆ. ಸಮಾಜದ ಸ್ಥಿತಿಗಳನ್ನು ತಿದ್ದುವ ಪ್ರಯತ್ನವನ್ನು ಮಾಡಿದ್ದಾರೆ. ಕಾಗಿನೆಲೆಯ ಆದಿಕೇಶವ ಎಂಬ ಅಂಕಿತನಾಮದಿಂದ 200ಕ್ಕೂ ಹೆಚ್ಚು ಕೀರ್ತನೆಗಳನ್ನು 50ಕ್ಕೂ ಹೆಚ್ಚು ಪದ್ಯಗಳನ್ನು ಬರೆದು ಸಂಗೀತ ಸಂಯೋಜಿಸಿ, ಹಾಡಿ ಜನರ ಮಧ್ಯೆ ಇದ್ದು ಅವರನ್ನು ಮೂಢತ್ವದಿಂದ ಹೊರತರಲು ಯತ್ನಿಸಿದ್ದರು, ಬಹಳಷ್ಟು ಸಫಲರೂ ಆಗಿದ್ದರು.

ಹೆಚ್ಚಿನ ಹರಿಸೇವೆಗಾಗಿ ಉಡುಪಿಯ ಮಠಕ್ಕೆ ತೆರಳಿದ ಕನಕದಾಸರಿಗೆ ಜಾತಿ ನಿಯಮಗನುಸಾರವಾಗಿ ಶ್ರೀ ಕೃಷ್ಣನ ದರ್ಶನ ಸಾಧ್ಯವಾಗಿರಲಿಲ್ಲ. ಪವಾಡ ಸದೃಶ್ಯವಾಗಿ ಕನಕದಾಸರ ಭಕ್ತಿಗೆ ಮೆಚ್ಚಿ ಶ್ರೀ ಕೃಷ್ಣ ತನ್ನ ನಿಂತ ನಿಲುವನ್ನೇ ಬದಲಾಯಿಸಿ ಕಿಂಡಿಯಿಂದ ದರ್ಶನ ಕೊಟ್ಟ ಕತೆ ಇಂದಿಗೂ ಜನಜನಿತವಾಗಿದೆ. ಉಡುಪಿಯಲ್ಲಿ ಕನಕನ ಕಿಂಡಿಯೆಂದು ಪ್ರಸಿದ್ಧವಾಗಿದೆ. ಈ ಪವಾಡದ ನಂತರ ಕನಕದಾಸರ ಕೀರ್ತಿ ನಾಡಿನ ಉದ್ದಗಲಕ್ಕೂ ಹರಡಿತ್ತು. ನಂತರದಲ್ಲಿಯಾದರು ಉಗಾಭೋಗಗಳು ಮತ್ತು ಮುಂದಲಿಗೆಗಳು ಎಂಬುದನ್ನು ಅವಿದ್ಯಾವಂತರಿಗೂ ಕೂಡ ಅರ್ಥವಾಗುವ ಭಾಷೆಯಲ್ಲಿ ಅಂದರೆ

**ಪುಟ 9 ಕ್ಕೆ ➤**

# ಭಾರತೀಯ ಇತಿಹಾಸದ ವಿಕೃತೀಕರಣ

(ಮುಂದುವರೆದದ್ದು)

ಆರ್ಯ ಎಂದರೆ ಪೂಜ್ಯ, ಗುಣ ಸಂಪನ್ನ, ಸುಸಂಸ್ಕೃತ ಎಂದೇ ಮೊದಲಿನಿಂದ ಇಲ್ಲಿ ಅರ್ಥೈಸಿರುವುದು, ಸಂಸ್ಕೃತ ಭಾಷೆಯ ಶಬ್ದಾರ್ಥ ಕೋಶವಾದ ಅಮರಕೋಶದಲ್ಲೂ ಸಹ 'ಆರ್ಯ ಪದದ ಅರ್ಥ ನಿರೂಪಣೆ ಈ ರೀತಿ ಇದೆ.

"ಮಹಾಕುಲ ಕುಲೀನಾರ್ಯ ಸಭ್ಯ ಸಜ್ಜನ ಸಾಧವಃ" (ಅಮರಕೋಶ, ಬ್ರಹ್ಮವರ್ಗ) ರಾಮಾಯಣದಲ್ಲಿ, ತಥಾಕಥಿತ ದ್ರಾವಿತನಾದ ರಾವಣನನ್ನು ಪತ್ನಿ ಮಂಡೋದರಿ ಸಂಬೋಧನೆ ಮಾಡುವಾಗ 'ಹೇ ಆರ್ಯಪುತ್ರ' ಎಂದು ಕರೆದಿರುವುದರ ಅರ್ಥ ರಾವಣ ಆರ್ಯರ ಪುತ್ರ ಎಂದು ಆಗುವುದು ಅಸಾಧ್ಯ. ಬದಲು ಶ್ರೇಷ್ಠ ಕುಲದಲ್ಲಿ ಹುಟ್ಟಿದವನೇ, ಉತ್ತಮ ಸಂತಾನದಲ್ಲಿ ಹುಟ್ಟಿರುವವನೇ ಎಂದಾಗುತ್ತದೆ. ಒಟ್ಟಿನಲ್ಲಿ ಸರಸ್ವತಿಯ ನದಿಯ ಶೋಧದ ನಂತರ ವಿಶ್ವದ ಅನೇಕ ಇತಿಹಾಸಕಾರರು ಭಾರತಕ್ಕೆ ಆರ್ಯ ಆಕ್ರಮಣದ ಸಿದ್ಧಾಂತವನ್ನು ಪೂರ್ತಿ ತಳ್ಳಿ ಹಾದಿದ್ದರು. ಇತ್ತೀಚೆಗೆ ಇಂಗ್ಲೆಂಡಿನ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್ ( ಬಿಬಿಸಿ) ಸಹ ಆರ್ಯ ದ್ರಾವಿಡ ಸಿದ್ಧಾಂತವನ್ನು ಈವರೆಗೆ ಪ್ರಸಾರ ಮಾಡಿದ್ದು ತಪ್ಪೆಂದು ತನ್ನ ತಪ್ಪನ್ನು ಒಪ್ಪಿಕೊಂಡಿದೆ.

ಹಾಗೆಯೇ 'ದ್ರಾವಿಡ' ಶಬ್ದವೂ ಜನಾಂಗ ಸೂಚಕವಲ್ಲ, ಒಂದು ನಿಶ್ಚಿತ ಪ್ರದೇಶದಲ್ಲಿ ವಾಸಿಸುವ ಎಲ್ಲರಿಗೂ ಅನ್ವಯವಾಗುವ ಭೌಗೋಳಿಕ ಕಲ್ಪನೆ ಮಾತ್ರ (ಬಂಗಾಲಿ, ಪಂಜಾಬಿ ಈ ರೀತಿ) ಎಂದು ಸಾಕ್ಷ್ಯಾಧಾರಗಳಿಂದ ಅನೇಕ ಇತಿಹಾಸ ತಜ್ಞರು ನಿರ್ಣಯಕ್ಕೆ ಬಂದಿದ್ದಾರೆ.

ಆರ್ಯ ಆಕ್ರಮಣ ಸಿದ್ಧಾಂತದ ಟೊಳ್ಳುತನವನ್ನು ಸಾಧಿಸುವ ಮತ್ತೊಂದು ವೈಜ್ಞಾನಿಕ ಸಿದ್ಧಾಂತ ಇತ್ತೀಚೆಗೆ ಹೊರಬಿದ್ದಿದೆ. ವಿಜ್ಞಾನಿಗಳ ಸಂಶೋಧನೆಯಂತೆ ಜನಾಂಗಗಳ 'ಜೀನ್ಸ್' (ವಂಶ ಪಾರಂಪರಿಕವಾಗಿ ಬಂದ ಕ್ರೋಮೋಸೋಮ್‌ಗಳು) ಸುಮಾರು 10,000 ವರ್ಷಗಳವರೆಗೆ ಬದಲಾಗುವುದಿಲ್ಲ ಹಾಗೂ ಜನಾಂಗ– ಜನಾಂಗಗಳ ಜೀನ್ಸ್ ಬೇರೆ ಬೇರೆ ರೀತಿಯೇ ಇರುತ್ತದೆ. ಯುರೋಪ್ ಅಥವಾ ಮಧ್ಯ ಏಷ್ಯಾದ ಜನರ ಜೀನ್ಸ್‌ಗೂ ಭಾರತದ ಜನರ ಜೀನ್ಸ್‌ಗೂ ಬಹಳ ವ್ಯತ್ಯಾಸಗಳಿರುವುದು ವೈಜ್ಞಾನಿಕವಾಗಿ ಸಿದ್ಧವಾಗಿದೆ. ಭಾರತದ ಉತ್ತರ ಹಾಗೂ ದಕ್ಷಿಣ ಭಾಗಗಳ ಜನರ ಜೀನ್ಸ್ ಒಂದೇ ರೀತಿ ಇರುವುದೂ ಕಂಡು ಬಂದಿದೆ. ನಿಜಕ್ಕೂ ಆರ್ಯರು ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದಿದ್ದರೆ ಭಾರತದ ಜನರ ಜೀನ್ಸ್ ಸಹ ಮಧ್ಯ ಏಷ್ಯಾದ ಜನರ ಜೀನ್ಸ್‌ನೊಡನೆ ಹೊಂದಾಣಿಕೆಯಾಗಬೇಕಾಗಿತ್ತು. ಆದರೆ ಜೀನ್ಸ್ ಹೊಂದಾಣಿಕೆ ಇಲ್ಲದ ಕಾರಣ ಆರ್ಯರು ಹೊರಗಿನಿಂದ ಬಂದವರು ಎಂಬ ಸಿದ್ಧಾಂತ ಪೂರ್ತಿ ಸುಳ್ಳಾಗುತ್ತದೆ. ಭಾರತದ ಎಲ್ಲ ಜನರ ಜೀನ್ಸ್ ಒಂದೇ ರೀತಿ ಇರುವುದರಿಂದ ಆರ್ಯ– ದ್ರಾವಿಡ ಎರಡೂ ಪ್ರತ್ಯೇಕ ಜನಾಂಗಗಳು ಎಂಬ ಸಿದ್ಧಾಂತ ಪೂರ್ತಿ ಸುಳ್ಳು ಎಂಬುದು ಸಾಬೀತಾಗಿದೆ.

ಆಂಗ್ಲ ಇತಿಹಾಸಕಾರರು ಸ್ವಾತಂತ್ರ್ಯ ಹೋರಾಟಗಳನ್ನು ಎಂದಿಗೂ ಮಾನ್ಯ ಮಾಡಲೇ ಇಲ್ಲ. ನಮ್ಮ ಅನೇಕ ಇತ್ತೀಚಿನ ಸ್ವಾತಂತ್ರ್ಯ ಹೋರಾಟಗಾರರನ್ನೂ, ಕ್ರಾಂತಿಕಾರಿಗಳನ್ನೂ ದೇಶದ್ರೋಹದ ಆಪಾದನೆ ಹೊರಿಸಿ ಥಳಿಸಿದರು. ಅನೇಕರನ್ನು ಗಲ್ಲಿಗೇರಿಸಿದರು. 1857ರಲ್ಲಿ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಇಡೀ ದೇಶದ ಬೇರೆ ಬೇರೆ ಭಾಗಗಳಲ್ಲಿ ಯೋಜನಾಪೂರ್ವಕವಾಗಿ ಆಂಗ್ಲ ಆಳ್ವಿಕೆಯ ವಿರುದ್ಧ ಪ್ರಥಮ ಬಾರಿಗೆ ಸೈನಿಕರು ಸಿಡಿದೆದ್ದರು.

ವಾಸ್ತವಿಕವಾಗಿ ಇದು ಮೊದಲಬಾರಿಗೆ ಆಂಗ್ಲರ ವಿರುದ್ಧ ಇಡೀ ದೇಶದಲ್ಲಿ ಒಟ್ಟಾಗಿ ನಡೆದ ಸ್ವಾತಂತ್ರ್ಯ ಹೋರಾಟವಾದರೂ ಬ್ರಿಟಿಷ್ ಇತಿಹಾಸಕಾರರು ಹಾಗೂ ಅವರ ವಾರಸುದಾರರಾದ ವಾಮಪಂಥೀ ಇತಿಹಾಸಕಾರರು ಇದಕ್ಕೆ 'ಸಿಪಾಯಿ ದಂಗೆ' ಎಂದು ಹೆಸರಿಸಿ ಇದಕ್ಕೆ ವಿಕೃತ ತಿರುವನ್ನು ಕೊಟ್ಟಿದ್ದಾರೆ.

ಸಿಬಿಎಸ್‌ಸಿ 8ನೇ ತರಗತಿಯ ಸಾಮಾಜಿಕ ವಿಜ್ಞಾನ ಪುಸ್ತಕದಲ್ಲಿ 1857ರ ಚಳುವಳಿಯು ಒಂದು ವಿದ್ರೋಹವಾಗಿತ್ತು ಎಂದು ವಾಮಪಂಥೀಯ ಇತಿಹಾಸಕಾರರು ಬಣ್ಣಿಸಿದ್ದಾರೆ.

ಒಟ್ಟಿನಲ್ಲಿ ಆಂಗ್ಲರು ತಮ್ಮ ಕುತಂತ್ರದಿಂದ ಮೇಲಿನ ಹಾಗೂ ವಿವಿಧ ಸುಳ್ಳು ಮತ್ತು ವಿಕೃತಿಗಳನ್ನು ಸೃಷ್ಟಿ ಮಾಡಿ ಅವುಗಳನ್ನು ನಂಬುವ ರೀತಿ ಇಲ್ಲಿನ ಜನಗಳ ಮಾನಸಿಕತೆಯನ್ನು ಕಟ್ಟಲು ಪ್ರಯತ್ನಿಸಿದರು. 1947ರಲ್ಲಿ ಭಾರತ ಸ್ವತಂತ್ರವಾದ ನಂತರ ಆಂಗ್ಲರ ಕುತಂತ್ರವನ್ನು ಅರ್ಥ ಮಾಡಿಕೊಂಡು ಭಾರತವು ತನ್ನದೇ ನೈಜ ಇತಿಹಾಸವನ್ನು ಇಲ್ಲಿನ ಹೊಸ ಪೀಳಿಗೆಗಳಿಗೆ ಪ್ರೇರಣಾದಾಯಕವಾಗಿ ಬಿಂಬಿಸುವ ಪ್ರಯತ್ನವನ್ನು ಮಾಡಬೇಕಾಗಿತ್ತು. ಆದರೆ ದುರದೃಷ್ಟವಶಾತ್ ಈ ರೀತಿ ಪ್ರಯತ್ನವೇ ನಡೆಯಲಿಲ್ಲ. ಇದಕ್ಕೆ ಕಾರಣವಾಗಿರುವ ಪಿತೂರಿಗಳು– ಕುತಂತ್ರಗಳ ಬಗ್ಗೆ ಮುಂದೆ ವಿಚಾರ ಮಾಡೋಣ.

## ಸ್ವಾತಂತ್ರ್ಯೋತ್ತರ ಕಾಲದ ವಿಕೃತಿಗಳು

ನಮಗೆ ಸ್ವಾತಂತ್ರ್ಯ ಬರುವ 90 ವರ್ಷಕ್ಕೂ ಮುನ್ನವೇ ಬ್ರಿಟಿಷರು ದೂರಾಲೋಚನೆ ಮಾಡಿ, ಇಲ್ಲಿನ ಶಿಕ್ಷಣ ಪದ್ಧತಿಯ ಬದಲಾವಣೆಯಿಂದ, ಭವಿಷ್ಯದಲ್ಲಿ ಭಾರತ ಹೇಗಿದ್ದೀತು ಎಂಬುದನ್ನು ಮನಗಂಡಿದ್ದರು. ಇದಕ್ಕೆ 23 ಜೂನ್ 1853ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್‌ನ ಆಯ್ಕೆ ಸಮಿತಿ ಮುಂದೆ ಸರ್ ಛಾರಲ್ಸ್ ಬ್ರಾವೇರಿಯನ್ ಮಂಡಿಸಿದ ವಾದ ಹೀಗಿದೆ. "The effect of training in European learning is to give an entirely new turn to the native mind. The young men educated in this way cease to strive after independence according to the original native model, and aim at improving the institutions of the country according to English model, with the ultimate result of establishing constitutional self – government.

They cease to regard us as enemies and usurpers, and they look upon us as friends and patrons and powerful beneficient persons under whose protection all they have most at heart for the regeneration of their country, will gradually be worked out.

We might be swept off the face of India in a day as matter of fact, those who look for the improvement of India

ಪುಟ 9 ಕ್ಕೆ ➤

➢ ಪುಟ 7 ರಿಂದ.....

ಕನ್ನಡದ ಆಡುಭಾಷೆಯಲ್ಲಿ ಬರೆದು ಸಮಾಜದ ಎಲ್ಲಾ ವರ್ಗದ ಜನರ ತಪ್ಪು ನೆಪ್ಪುಗಳನ್ನು ಅದರಲ್ಲೂ ಜಾತಿ ವ್ಯವಸ್ಥೆಯ ಬಗ್ಗೆ ವಿಶೇಷವಾಗಿ ತಿದ್ದುವ ಕೆಲಸ ಮಾಡಿದ್ದಾರೆ. ಕೆಳವರ್ಗದ ಜನರನ್ನು ಮೇಲೆತ್ತುವ ಪ್ರಯತ್ನ ಮುಂದಲಿಗೆಗಳಲ್ಲಿ ಕಾಣಸಿಗುತ್ತವೆ.

'ನಾನು ಎನ್ನುವ ಅಹಂಭಾವ ಹೋದರೆ ಮೋಕ್ಷ ಸಿಗುವುದು' ಎಂದು ತಿಳಿಸಿಕೊಟ್ಟ ಮಹಾನ್ ದಾಸರಿವರು. ಇವರ ಪ್ರತಿಯೊಂದು ಕೀರ್ತನೆಗಳು ಸಮಾಜದ ಜನರನ್ನು ಶ್ರೇಷ್ಠರನ್ನಾಗಿ ಮಾಡುವುದರ ಬಗ್ಗೆಯೇ ಇವೆ. ಇವರ ಸರ್ವಶ್ರೇಷ್ಠ ಮಹಾನ್ ಕೃತಿಗಳು ಹೀಗಿವೆ. 'ನಳಚರಿತ್ರೆ, ಹರಿಭಕ್ತಸಾರ, ಮೋಹನ ತರಂಗಿಣಿ, ರಾಮಧ್ಯಾನ ಚರಿತೆ ಮತ್ತು ನೃಸಿಂಹಸ್ತವ ಮುಂತಾದವುಗಳು. ಎಲ್ಲದರ ಸಾರ ಜಾತಿ ಎಂಬ ಅನಿಷ್ಟ ಪದ್ಧತಿಯ ವಿರುದ್ಧವೇ ಆಗಿವೆ ಮತ್ತು ಹರಿಯೇ ಸರ್ವೋತ್ತಮ, ಹರಿಯೇ ಶಾಶ್ವತ, ಹರಿನಾಮ ಸ್ಮರಣೆಯಿಂದಲೇ ಜನ್ಮ ಸಾರ್ಥಕ ಎಂಬುದನ್ನು ತಿಳಿಸಲಾಗಿದೆ. ಬಹುಕಾಲ ಇವರು ಉಡುಪಿಯಲ್ಲೇ ಇದ್ದರು ಮತ್ತು ಇವೆಲ್ಲವುಗಳ ರಚನೆ ಆಯಿತು ಎಂಬ ಮಾಹಿತಿ ಇದೆ. ಕನಕದಾಸರು ತಮ್ಮ ಅಂತಿಮ ದಿನಗಳನ್ನು ಅವರ ಕುಲದೇವರಾದ ವೆಂಕಟೇಶ್ವರ ಸನ್ನಿಧಾನದಲ್ಲಿ ಅಂದರೆ ತಿರುಪತಿಯಲ್ಲಿ ಕಳೆದಿದ್ದರು ಎಂಬುದರ ಬಗ್ಗೆ ಪುರಾವೆ ಇವೆ. ಒಟ್ಟು 100 ವರುಷ ತುಂಬು ಬಾಳ್ವೆ ಮಾಡಿದ್ದರು.

## ಅಂತಿಮ ನುಡಿ

ಕುರುಬ ದಂಡನಾಯಕರಾಗಿದ್ದ ಕನಕದಾಸರು, ಹರಿದಾಸರಾಗಿ ಪುರುಷೋತ್ತಮರೆನಿಸಿಕೊಂಡವರು, ಕುಲದಲ್ಲಿ ಇರುವುದು ಎರಡೇ ಜಾತಿ. ಒಂದು ಒಳ್ಳೆಯ ನಡತೆಯುಳ್ಳ ಕಾಮ, ಕ್ರೋಧ, ಮದ ಮತ್ಸರವನ್ನು ಬಿಟ್ಟು ಉತ್ತಮ ಕುಲ, ಮತ್ತೊಂದು ಅರಿಷಡ್ವರ್ಗಗಳಿಂದ ಬಂಧಿತರಾಗಿ ಹೀನ ಕೆಲಸ ಮಾಡುವ ಅಧಮಕುಲ ಈ ತತ್ವಕ್ಕೆ ಗಟ್ಟಿಯಾಗಿ ನಿಂತವರು.

ಜಾತಿ ಜಾತಿ ಎಂದು ಹೊಡೆದಾಡುವ ಸಮಾಜಕ್ಕೆ ಹುಟ್ಟಿನಿಂದ ಮನುಷ್ಯನ ಶ್ರೇಷ್ಠತೆ ಅಳೆಯುವುದು ತಪ್ಪು, ಅವನ ಕರ್ಮದಿಂದ ಅಳೆಯಬೇಕು ಎಂದು ಸಮಾಜಕ್ಕೆ ತಿಳಿ ಹೇಳಿದವರು. ಕುಲಕುಲವೆಂದು ಹೊಡೆದಾಡದೆ, ತಿರುಕನ ಕನಸು ಕಾಣದೆ ಎಲ್ಲಾರು ಮಾಡುವುದು ಹೊಟ್ಟೆಗಾಗಿ ಮತ್ತು ಗೇಣು ಬಟ್ಟೆಗಾಗಿ ಎಂಬುದನ್ನು ಅರಿತರೆ ಮನುಷ್ಯ ಕುಲ ಉದ್ಧಾರವಾಗುವುದು. ಯಾವ ಕುಲವೂ ಶ್ರೇಷ್ಠವಲ್ಲ, ಯಾವುದೂ ಹೀನವಲ್ಲ ಎಲ್ಲವೂ ಅವರವರ ಕರ್ಮದ ಮೇಲೆ ನಿಂತಿದೆ ಎಂಬುದನ್ನು ಕನಕದಾಸರು ತುಂಬಾ ಸರಳವಾಗಿ ತಮ್ಮ ಕೀರ್ತನೆಗಳು ಮತ್ತು ಪದ್ಯಗಳಲ್ಲಿ ಹೇಳಿದ್ದಾರೆ.

ಕನಕದಾಸರ ಮುಖ್ಯ ಉದ್ದೇಶ ಮತ್ತು ಅವರ ನಿಲುವನ್ನು ನಿರ್ಲಕ್ಷಿಸಿ ಇಂದಿನ ಸಮಾಜ ಮತ್ತು ನಾಯಕರು ಜಾತಿರಾಜಕಾರಣ ಮಾಡತೊಡಗಿದ್ದಾರೆ. ಜಾತಿಯನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು ಧರ್ಮಕ್ಕೆ ಮಸಿ ಬಳಿಯತೊಡಗಿದ್ದಾರೆ. ದಾಸ ಶ್ರೇಷ್ಠರಾದ ಕನಕದಾಸರ ಜಾತಿಯನ್ನೇ ಮುಂದಿಟ್ಟುಕೊಂಡು ರಾಜಕಾರಣ ಮಾಡುತ್ತಿರುವುದು ದುರಂತವೇ ಸರಿ. ಕನಕದಾಸರ ಹೆಸರಿಗೆ ಕಳಂಕ ತರುವುದನ್ನು ಬಿಟ್ಟು ಜಾತಿ ಜಾತಿಯೆಂದು ಹೊಡೆದಾಡದೆ ಧರ್ಮದ ರಕ್ಷಣೆ ಮಾಡುವುದರತ್ತ ನಮ್ಮ ಇಂದಿನ ನಾಯಕರು ಮತ್ತು ಸಮಾಜ ಮುಂದಾಗಬೇಕಾಗಿದೆ. ಇದೇ ಕನಕದಾಸರ ಆಶಯವೂ ಕೂಡ ಆಗಿದೆ. ಅವರ ಸದುದ್ದೇಶದ ಜೀವನಕ್ಕೆ ಗೌರವ ಕೊಡುವುದು ನಮ್ಮ ನಿಮ್ಮೆಲ್ಲರ ಕೈಯಲ್ಲೇ ಇದೆ. ಕನಕದಾಸ ಜಯಂತಿಯನ್ನು ಈ ಉದ್ದೇಶದಿಂದಲೇ ಆಚರಿಸುವುದು ಕನಕದಾಸರಿಗೆ ಕೊಡುವ ಗೌರವವಾಗಿದೆ ಎಂದರೆ ತಪ್ಪೇನಿಲ್ಲ.

"ಯಾವಾಗ ನಿಮ್ಮಲ್ಲಿರುವ 'ನಾನು' ಎಂಬ ಅಹಂ ನಿಮ್ಮನ್ನು ಬಿಟ್ಟಿ ಹೋಗುತ್ತೋ ಅವತ್ತು ನೀವು ಮೋಕ್ಷಕ್ಕೆ ಅರ್ಹರಾಗುತ್ತೀರಿ..."

➢ ಪುಟ 8 ರಿಂದ.....

according to this model are continually meditation on plots and conspiracies with that object.

The object must be worked out by very gradual steps and ages may elapse before the ultimate will be attained. And in the mean time, the minority who already regard us with respect and aim at regeneration their country with our assistance, will receive continual accessions, until in the course of time they become majority.

Whereas if the connections ceases according to the other course of circumstances we shall leave a grateful country and a highly improved country.

Sir Charles Travellion- House of Commons-23 June, 1853(Select Committee)

ನಮ್ಮ ದೇಶದಲ್ಲಿ ಆಂಗ್ಲರು ಹುಟ್ಟು ಹಾಕಿದ ಎಲ್ಲಾ ಸುಳ್ಳು ಮತ್ತು ವಿಕೃತಿಗಳನ್ನು ನಂಬಿ, ಅದರಿಂದ ಪೂರ್ತಿ ಪ್ರಭಾವಿತರಾಗಿ ದೇಶದ ತಥಾಕಥಿತ ಬುದ್ಧಿಜೀವಿಗಳು ಮತ್ತು ರಾಜಕೀಯ ನಾಯಕರೂ ಸೇರಿದಂತೆ ಅನೇಕ ಜನ, ಆಂಗ್ಲರು ಕೊಟ್ಟ ಶಿಕ್ಷಣಕ್ಕೆ ಪೂರ್ತಿ ಮಾರುಹೋದರು. ಮೆಕಾಲೆ ಅಪೇಕ್ಷೆಪಟ್ಟಂತೆ ಇವರುಗಳು ಕರಿಬಣ್ಣದ ಆಂಗ್ಲೇಯರಾಗಿಬಿಟ್ಟರು.

ಅವರಲ್ಲಿ ಪ್ರಮುಖ ವ್ಯಕ್ತಿ ಎಂದರೆ ನಮ್ಮ ದೇಶದ ಮೊದಲ ಪ್ರಧಾನಿ ಪಂಡಿತ ಜವಹರ್‌ಲಾಲ್ ನೆಹರೂರವರು. 1929ರಲ್ಲೇ ಗಾಂಧಿಜೀಯವರಿಗೆ ಬರೆದ ಪತ್ರದಲ್ಲಿ "ಹಿಂದೆ ಇತ್ತು ಎನ್ನಲಾದ ತಥಾಕಥಿತ ರಾಮರಾಜ್ಯದಲ್ಲಿ ಎಲ್ಲಾ ಚೆನ್ನಾಗಿತ್ತು ಎಂದು ನಾನು ನಂಬುವುದಿಲ್ಲ ಅಥವಾ ರಾಮರಾಜ್ಯವು ಬರುವುದು ನನಗೆ ಬೇಕೂ ಇಲ್ಲ. ಪಾಶ್ಚಿಮಾತ್ಯ ಔದ್ಯೋಗಿಕ ನಾಗರೀಕತೆ ನಮ್ಮ ದೇಶವನ್ನು ಖಂಡಿತಾ ಗೆಲ್ಲುತ್ತದೆ. ನೀವು ಪಾಶ್ಚಿಮಾತ್ಯ ನಾಗರಿಕತೆಯ ಬಗ್ಗೆ ತಪ್ಪು ನಿರ್ಣಯಕ್ಕೆ ಬಂದಿದ್ದೀರಿ. 'ಪಶ್ಚಿಮದಿಂದ ನಾವು ಕಲಿಯುವುದು ಏನೂ ಇಲ್ಲ, ಭಾರತ ತನ್ನ ವಿವೇಕದ ಉನ್ನತ ಮಟ್ಟ ತಲುಪಿತ್ತು' ಎಂಬ ನಿಮ್ಮ ಅಭಿಪ್ರಾಯದ ಬಗ್ಗೆ ಖಂಡಿತಾ ನಾನು ಒಪ್ಪುವುದಿಲ್ಲ" ಎಂದು ತಿಳಿಸಿದ್ದರು. 1950ರ ದಶಕದಲ್ಲಿ ನಮ್ಮ ದೇಶದಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಗಾಲ್‌ಬ್ರೆತ್‌ರವರು ತಮ್ಮ ಆತ್ಮಕಥೆಯಲ್ಲಿ "ಒಂದು ಬಾರಿ ನೆಹರೂರವರು ಆರಾಮವಾದ ಮನಸ್ಥಿತಿಯಲ್ಲಿದ್ದಾಗ ನನಗೆ 'I am the Last Englishman to rule India' ಎಂದು ತಿಳಿಸಿದರು" ಎಂದು ಉಲ್ಲೇಖ ಮಾಡಿದ್ದಾರೆ. ಅಲ್ಲದೆ " ಕೆಲವರು ಅವರ ಮೇಲೆ ಹೂಗಳಿಕೆಯ ಮಳೆಯನ್ನು ಕರೆದರೆ ಅವರು ಹಿಗ್ಗುತ್ತಾರೆ, ಉಬ್ಬುತ್ತಾರೆ. ಹೊಗಳಿಕೆಯ ಈ ಸೂಕ್ಷ್ಮ ಆಯುಧವನ್ನು ಬಳಸಿಕೊಳ್ಳುವ ಕುತಂತ್ರಿಗಳೂ ಈ ಪ್ರಪಂಚಲ್ಲಿ ಎಷ್ಟೋ ಮಂದಿ. ನೀವು ಎಂತಹಾ ಅಹಿಂಸಾಪ್ರಿಯರು, ಶಾಂತಿಪ್ರಿಯರು, ಉದಾರಿಗಳು, ಪ್ರಪಂಚದ ಅತಿ ದೊಡ್ಡ ಅಂತರಾಷ್ಟ್ರೀಯ ವ್ಯಕ್ತಿಗಳಲ್ಲಿ ನೀವೂ ಒಬ್ಬರು ಎಂದೆಲ್ಲಾ ಹೇಳಿದಾಗ ಕೊಚ್ಚಿಹೋಗುತ್ತಾರೆ". ಎಂದೂ ಬರೆದಿದ್ದಾರೆ.

●

# ಪೂರ್ವಸೂರಿಗಳು

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು



(ಮುಂದುವರೆದದ್ದು)

ನರಹರಿಗಳು ಶರೀರ ಮನ– ಬುದ್ಧಿ– ಅನುಭವಗಳೆಲ್ಲದರಲ್ಲೂ ದೈತ್ಯ ಪ್ರತಿಭೆ ಹೊಂದಿದವರು ಎಂಬುದು ಬಹುತೇಕರ ಅನುಭವ. ಈ ಸಂಬಂಧಿಕವಾಗಿ ಅವರೆಂದೂ ಸುಸ್ತಾಗದೆ ಪ್ರತ್ಯಕ್ಷ– ಅಪ್ರತ್ಯಕ್ಷವಾಗಿ ಸಂಘ– ಸಂಘೇತರ ಚಟುವಟಿಕೆಗಳಲ್ಲಿ ಸ್ಫೂರ್ತಿಯುತವಾಗಿ ಪಾಲ್ಗೊಳ್ಳುತ್ತಿದ್ದುದೇ ಸಾಕ್ಷಿ. ಜನಸೇವಾ ವಿದ್ಯಾಕೇಂದ್ರದ ಪ್ರಾರಂಭದ ದಿನಗಳಿಂದ ಇಂದಿನವರೆಗೂ ಅದೆಷ್ಟು ಸಲಹೆ– ಸಹಕಾರ ನೀಡಿದ್ದಾರೋ ಹೇಳಲು ಅಸದಳ. ಇದಕ್ಕೆ ಮುಖ್ಯ ಕಾರಣ, ಬೆಳೆದ ಮಕ್ಕಳಿಗೆ ಭಾರತೀಯ ಶಿಕ್ಷಣ– ಸಂಸ್ಕಾರ ನೀಡಿದಲ್ಲಿ ದೇಶ – ಧರ್ಮ– ಸಂಸ್ಕೃತಿ ಸಂರಕ್ಷಣೆಯ ಸತ್ಕಾರ್ಯದಲ್ಲಿ ಉತ್ತಮ ವ್ಯಕ್ತಿಗಳ ಸಮೂಹ ನಿರ್ಮಾಣಗೊಳ್ಳುವುದೆಂಬ ನಂಬಿಕೆಯೇ ಆಗಿದೆ. ಬೆಂಗಳೂರಿನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಆರಂಭವಾದ ದಿನಗಳಿಂದಲೂ ಸ್ವಯಂಸೇವಕರಾಗಿರುವ ನರಹರಿಗಳು ಸಂಘದಲ್ಲಿ ಕಲಿತ ಈ ಪಾಠವನ್ನು ಮುಂದೆ ಶಿಕ್ಷಕರಾಗಿ ತಮ್ಮ ವೃತ್ತಿಯಲ್ಲೂ, ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳಲ್ಲೂ ಮೂಡಿಸುವಲ್ಲಿ ಸಾಕಷ್ಟು ಯಶಸ್ವಿಗಳಿಸಿದ್ದಾರೆಂಬುದನ್ನು ಹಳೆಯ ವಿದ್ಯಾರ್ಥಿಗಳು ನೆನಪಿಸಿಕೊಳ್ಳುತ್ತಾರೆ. ಇನ್ನು ಸಂಘದ ಜವಾಬ್ದಾರಿ ಹೊತ್ತು ಕರ್ನಾಟಕವಷ್ಟೇ ಅಲ್ಲದೆ ದಕ್ಷಿಣ ಭಾರತದ ವಿವಿದೆಡೆಗಳಲ್ಲಿ ತಮ್ಮ ಪ್ರವಾಸದ ಸಂದರ್ಭದಲ್ಲಿ ತಮ್ಮ ಸೌಜನ್ಯಯುತ ನುಡಿ– ಅನುಶಾಸನಯುತ ನಡೆಯಿಂದ ಮೇಲ್ಪಂಕ್ತಿಯಾಗಿದ್ದು ಪ್ರಶಿಕ್ಷಣ ನೀಡುವ ಮೂಲಕ ಸಹಸ್ರಾರು ಕಾರ್ಯಕರ್ತರನ್ನು ರೂಪುಗೊಳಿಸಿದ್ದಾರೆ.

ವ್ಯವಸ್ಥಾ ಕೌಶಲ್ಯ ನರಹರಿಯವರ ಇನ್ನೊಂದು ಉಲ್ಲೇಖನೀಯ ಅಚ್ಚುಮೆಚ್ಚಿನ ವಿಷಯ. ಕಾರ್ಯಕ್ರಮ ಸಣ್ಣದಿರಲಿ, ಬೃಹತ್ ಶಿಬಿರವೇ ಇರಲಿ ಅದರ ಪೂರ್ವಸಿದ್ಧತೆ, ಪ್ರತ್ಯಕ್ಷ ನಿರ್ವಹಣೆ, ಸಹಭಾಗಿಯಾಗುವವರಾರಿಗೂ ಅನಾನುಕೂಲವಾಗದಂತೆ ಕಟ್ಟೆಚ್ಚರ, ಕಾರ್ಯಕ್ರಮ ಮುಗಿದ ನಂತರ ಆಯಾ ಸ್ಥಾನಗಳಿಗೆ ಸಾಮಾನು ಸರಂಜಾಮುಗಳ ವಾಪಸಾತಿ ಇತ್ಯಾದಿ ಒಂದೊಂದು ಸಂಗತಿಯಲ್ಲೂ ಅವರ ಚಿಂತನೆಯ ಛಾಪು ಕಾಣುವಂತಿರುತ್ತಿತ್ತು.

ವ್ಯವಸ್ಥೆ ಪಾಕಶಾಲೆಯದಿರಲಿ, ಸ್ನಾನಗೃಹ, ಶೌಚಾಲಯದ್ದಿರಲಿ, ಪ್ರಥಮ ಆದ್ಯತೆ ಶಿಬಿರದಲ್ಲಿ ಪಾಲ್ಗೊಳ್ಳುವವರಿಗೆ ಅನಾನುಕೂಲವಾಗಬಾರದೆಂಬ ಸಂಗತಿಗೆ. ಉದಾಹರಣಾರ್ಥವಾಗಿ ಪಾಕಶಾಲೆಯ ವ್ಯವಸ್ಥೆಯ ಬಗ್ಗೆ ಹೇಳುವುದಾದಲ್ಲಿ ಅಲ್ಲಿ ಒಲೆ ಹಾಕಿ, ಸೌದೆ ಪೇರಿಸಿ ಇಡುವುದರಿಂದ ಆರಂಭಿಸಿ, ಅಡಿಗೆಯಲ್ಲಿ ಶುಚಿ, ರುಚಿ, ಮಿತವ್ಯಯ, ಅಡುಗೆಯವರ ಸೌಕರ್ಯ ಇತ್ಯಾದಿ ಎಲ್ಲವೂ ಅವರ ಚಿಂತನೆಯ ವ್ಯಾಪ್ತಿಗೆ ಒಳಪಡುವಂತಹದೇ. ಇಂಜಿನಿಯರಿಂಗ್ ಪದವೀಧರರಾಗಿದ್ದರೂ ಸೂಪಶಾಸ್ತ್ರದಲ್ಲಿ ಅವರಿಗಿರುವ ಅನುಭವ ಸ್ವತಃ ಅದರಿಂದಲೇ ಬದುಕು ನಡೆಸುವಂತಹವರನ್ನೂ ಬೆರಗುಗೊಳಿಸುವಂತಹದು.

ಮಾಡಿರುವ ಅಡಿಗೆಯನ್ನು ಸಂತೃಪ್ತರಾಗಿ ಊಟ ಮಾಡುವಂತೆ ಅಚ್ಚುಕಟ್ಟಾಗಿ ಬಡಿಸುವ ವಿಧಾನದಲ್ಲೂ ಅವರ ಅನುಭವಪೂರ್ಣ ಮಾರ್ಗದರ್ಶನವಿರುತ್ತಿದ್ದುದು ಸರ್ವೇಸಾಮಾನ್ಯ. ಸಂಘದ ಶಿಬಿರಗಳಲ್ಲಿ ಊಟ ಬಡಿಸುವುದನ್ನು ಒಂದು ಕಲೆಯಾಗಿ ವಿಕಾಸಗೊಳಿಸಿದವರು ನರಹರಿಯವರೆಂದರೆ ಖಂಡಿತಕ್ಕೂ ತಪ್ಪಲ್ಲ. ಇದಕ್ಕೆ ಕಾರಣ ಗುರುತಿಸುವುದು ಕಷ್ಟವಲ್ಲ. ಅವರದು ಸ್ವಭಾವತಃ ತಾಯಿಯ ಅಂತಃಕರಣ, ತುರ್ತು ಪರಿಸ್ಥಿತಿಯ ದಿನಗಳಲ್ಲಿ ಬಂಧನಕ್ಕೊಳಗಾಗದೆ ಹೊರಗಡೆ ಪ್ರಾಂತ ಕೇಂದ್ರದಲ್ಲಿ ಇದ್ದು ಭೂಗತ ಚಟುವಟಿಕೆಗಳ ಸಮನ್ವಯದ ಕೊಂಡಿಯಾಗಿರಬೇಕೆಂಬ ಹೊಣೆ ಅವರಿಗೆ ವಹಿಸಲಾಗಿತ್ತು. ಅದೊಂದು ಕ್ಲೇಶದಾಯಕ ಜವಾಬ್ದಾರಿಯೆಂಬುದು ಅನುಭವವಿರುವವರು ಮಾತ್ರ ಗ್ರಹಿಸಬಲ್ಲರು. ಸೆರೆಮನೆ ಸೇರುವುದು ಎಷ್ಟೋ ವಾಸಿ, ಹೊರಗಡೆ ಬಂಧನದ ತೂಗುಗತ್ತಿ ಕೆಳಗೆ ಸದಾ ತಲೆಮರಿಸಿಕೊಂಡು ಓಡಾಡಬೇಕಾದ ಸ್ಥಿತಿ. ಮೈಯಲ್ಲಾ ಕಣ್ಣಾಗಿಸಿ, ಸಹಕಾರಿಗಳನ್ನೂ ನಿರಂತರವಾಗಿ ಸಂಪರ್ಕಿಸುತ್ತ ಓಡಾಡಬೇಕಾದ ಅನಿವಾರ್ಯತೆ. ಕಾರಣಾಂತರಗಳಿಂದ ಮಾಡಿದ್ದ ಯೋಜನೆಗಳಲ್ಲಿ ಎಡವಟ್ಟಾಗಿ, ಅಸ್ತವ್ಯಸ್ತವಾಗುತ್ತಿದ್ದರೂ ಅಪರೂಪವೇನಲ್ಲ. ಎಲ್ಲ ಸಂದರ್ಭಗಳಲ್ಲೂ ಪ್ರಸಂಗಾವಧಾನತೆ ಉಳಿಸಿಕೊಂಡು, ಮನಸ್ಸಿನ ಸ್ಥಿಮಿತತೆ ಕಳೆದುಕೊಳ್ಳದೆ ಮಾಡಬೇಕಾದಂತಹ ಹೊಣೆಯದು. ಅದನ್ನವರು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದರು.

ಹೊರಗಣ್ಣಿಗೆ ಕಾಣುವಂತೆ ನರಹರಿಯವರು ಇನ್ನಿತರರಂತೆ ಸಾಮಾನ್ಯರೇ. ಒಂದಿಷ್ಟು ಪರಿಚಿತರಾದ ಮೇಲೆ ಅವರೋರ್ವ ಮೃದುಭಾಷಿ, ಸ್ನೇಹಶೀಲ, ಸಿದ್ಧಮನದ ಸೇವಾಸಕ್ತ ಸ್ವಭಾವದವರೆಂಬುದು ಗೊತ್ತಾಗಲೂಬಹುದು. ಆದರೆ ಇದು ಸಹ ಅವರ ವ್ಯಕ್ತಿತ್ವದ ಆಂಶಿಕ ಮಾತ್ರ ಮುಖ. ಅವರ ಪರಿಪಕ್ವ ಚಿಂತನೆಯ ಆಳ, ವಿಸ್ತಾರ, ತಿಳಿ ಆಗಸದಂತಹ ಮನಸ್ಸಿನ ವೈಶಾಲ್ಯ, ನಿರ್ಮಲ ಅಂತಃಕರಣದ ಎತ್ತರ, ಮಾತುಗಳಲ್ಲಿರುವ ತೂಕ ಅವರ ನಿಕಟ ಪರಿಚಯವಿರುವವರಿಗೂ ಅನೇಕ ಬಾರಿ ಗೊತ್ತಾಗದಿರುವುದುಂಟು. "ಅತಿಪರಿಚಯಾದವಜ್ಞಾ"... ಎಂಬ ಮಾತು ಅವರಿಗೆ ಸಂಬಂಧಿಸಿದಂತೆ ನೂರಕ್ಕೆ ನೂರರಷ್ಟು ಸತ್ಯ.

ಶಿಕ್ಷಕ ಸಂಘವನ್ನೂ ಒಳಗೊಂಡು ಸಂಘ ಪರಿವಾರದ ಅನೇಕ ಸಂಘಟನೆಗಳಲ್ಲಿ ಅವರು ತೊಡಗಿಸಿಕೊಂಡಿದ್ದರು. ಬಹಳ ವರ್ಷ ಅವರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಖಜಾಂಚಿಯಾಗಿಯೂ ಕೆಲಸ ಮಾಡಿದ್ದರು. ಶಿಕ್ಷಕ ಸಂಘದ ಖಜಾಂಚಿಯಾದವರಿಗೆಲ್ಲ ಹಾಗು ಎಲ್ಲಾ ಕಾರ್ಯಕರ್ತರಿಗೂ ತಮ್ಮ ಅನುಭವಗಳ ಪಾಠ ಹೇಳಿದ್ದರು. ಸಾರ್ವಜನಿಕ ಹಣವನ್ನು ಅತ್ಯಂತ ಎಚ್ಚರಿಕೆಯಿಂದ ಬಳಸಬೇಕು. ಅದರ ಪ್ರತಿ ಕಾಸೂ ಪವಿತ್ರವಾದದ್ದು. ಆದ್ದರಿಂದ ಪ್ರತಿ ಪೈಸೆಗೂ ಲೆಕ್ಕ ಇಡಬೇಕು. ಒಂದು ಸಂಘಟನೆಯ ವಿಶ್ವಾಸಾರ್ಹತೆ, ಅದು ಸಾರ್ವಜನಿಕ ಹಣವನ್ನು ಯಾವ ರೀತಿ ಬಳಸುತ್ತದೆ, ಎಂಬುದರ ಮೇಲೆ ಅವಲಂಬಿತವಾಗಿದೆ. ಅಂದರೆ ಲೆಕ್ಕ ಪತ್ರಗಳ ದಾಖಲೆಗಳು ಅತ್ಯಂತ ಪಾರದರ್ಶಕವಾಗಿರಬೇಕು. ಈ ಎಲ್ಲಾ ಸಂಗತಿಗಳೂ ಅವರಿಂದ ಕಲಿತ ಪಾಠ. ಸ್ವತಃ ಅವರ ಬೀರುವಿನಲ್ಲಿ ಇದ್ದದ್ದು ಮೂರ್‍ನಾಲ್ಕು ಪೆಟ್ಟಿಗೆಗಳು. ಅದರಲ್ಲಿ ಬೇರೆ ಬೇರೆ ಹಣ. ಅದರೊಂದಿಗೆ ಲೆಕ್ಕಪತ್ರದ ಚೀಟಿ, ಒಂದಕ್ಕೆ ಮತ್ತೊಂದನ್ನು ಬೆರೆಸುವಂತಿಲ್ಲ, ಇದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಇದು ಅವರು ಅನುಸರಿಸುತ್ತಿದ್ದ ರೀತಿ. ಇದು ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರು ಅನುಸರಿಸಬೇಕಾದ ನೀತಿ.

●

# ಪ್ರೇರಣಾ ದಿವಸ ಮತ್ತು ಒಂದು ದಿನದ ವಿಚಾರ ಸಂಕಿರಣ



ಧಾರವಾಡ: ಕೆ.ಆರ್.ಎಂ.ಎಸ್.ಎಸ್ ಸಂಸ್ಥಾಪನ ದಿನ ಹಾಗೂ ಶಿಕ್ಷಕರ ದಿನಾಚರಣೆ ನಿಮಿತ್ತ "ಪ್ರೇರಣಾ ದಿವಸ ಮತ್ತು ಒಂದು ದಿನದ ವಿಚಾರ ಸಂಕಿರಣ ಉದ್ಘಾಟನೆ 4–09–2024 ರಂದು ಕರ್ನಾಟಕ ವಿಶ್ವವಿದ್ಯಾಲಯದ ಗೋಲ್ಡನ್ ಜುಬಿಲಿ ಹಾಲ್‌ನಲ್ಲಿ ನೆರವೇರಿತು.

"ಶಿಕ್ಷಕರ ಅಭಿವೃದ್ಧಿ: ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಉಪಕ್ರಮಗಳು" "ಟೀಚರ್ ಡೆವಲಪ್‌ಮೆಂಟ್ : ಯುಜಿಸಿ ಇನಿಷೀಯುಟಿವ್ಸ್" ವಿಷಯುದ ಮೇಲೆ ಡಾ. ತ್ಯಾಗರಾಜ, ಕುಲಪತಿಗಳು, ರಾಣಿಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಇವರು ವಿಶೇಷ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಡಾ. ಪ್ರಮೋದ ಗಾಯಿ ಸರ್ ನಿವೃತ್ತ ಕುಲಪತಿಗಳು ಕೆ ಯು ಡಿ . ಡಾ. ಪ್ರಕಾಶ ಹೊಸಮನಿ, ಸಹ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ, ಡಾ. ಸುಭಾಷ್‌ಚಂದ್ರ ನಾಟೀಕರ್, ಅಧ್ಯಕ್ಷರು ಪ.ಜಾ.–ಪ.ಪಂ. ಸ್ನಾತಕೋತ್ತರ ಶಿಕ್ಷಕ ಸಂಘ ಕ.ವಿ.ವಿ. ಧಾರವಾಡ, ಡಾ. ಮೋತಿಲಾಲ್ ರಾಠೋಡ್, ಅಧ್ಯಕ್ಷರು ಕೆ.ಜಿ.ಸಿ.ಟಿ.ಎ. ದಾರವಾಡ ವಲಯ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಅಧ್ಯಾಪಕರುಗಳಿಗೆ ಅಧ್ಯಾಪಕ ಭೂಷಣ ಪ್ರಶಸ್ತಿ, ಉತ್ತಮ ಶಿಕ್ಷಕ, ಉತ್ತಮ ಸಂಶೋಧಕ, ಉತ್ತಮ ಆಡಳಿತಗಾರ, ಉತ್ತಮ ಗ್ರಂಥಪಾಲಕ ಕಾಲೇಜು ಅಧ್ಯಾಪಕರಿಗಾಗಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಡಾ ರಘು ಆಕಮಂಚಿ ಸರ್ ದಕ್ಷಿಣ ಮಧ್ಯ ಕ್ಷೇತ್ರೀಯ ಪ್ರಮುಖ ಎ ಬಿ ಆರ್ ಎಸ್ ಎಮ್, ಡಾ ಗುರುನಾಥ ಬಡಿಗೇರ ಅಧ್ಯಕ್ಷರು ಕೆ ಆರ್ ಎಂ ಎಸ್ ಎಸ್ , ಡಾ ಸಿ ವಿ ಮರಿದೇವರ್ಮಠ್ ಸರ್, ಡಾ. ಜಿ. ಸಿ. ಗುಮ್ಮಗೋಳಮಠ, ಅಧ್ಯಕ್ಷರು ಕವಿವಿ ವಿಭಾಗ, ಡಾ ಜಯಾನಂದ ಹಟ್ಟಿ ಕಾರ್ಯದರ್ಶಿ ಕೆ ಯು ಡಿ ವಿಭಾಗ, ಡಾ. ಶೈಲಜಾ ಹುದ್ದಾರ, ಡಾ ಸಂಗೀತಾ ಕಟ್ಟಿಮನಿ, ಸಂದೀಪ ಬೂದಿಹಾಳ ಅಧ್ಯಕ್ಷರು ಮಾಧ್ಯಮಿಕ ಶಿಕ್ಷಕ ಸಂಘ ವೇದಿಕೆ ಮೇಲೆ ಉಪಸ್ಥಿತರಿದ್ದರು.




ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ ಮತ್ತು ಅಲಯನ್ಸ್ ವಿಶ್ವವಿದ್ಯಾಲಯ ಸಂಯುಕ್ತಾಶ್ರಯದಲ್ಲಿ "ಸ್ವಾವಲಂಬಿ ಭಾರತಕ್ಕಾಗಿ ಶಿಕ್ಷಣ" ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ 23 ಆಗಸ್ಟ್ 2024 ಶುಕ್ರವಾರ ಜೆಆರ್ ಡಿ ಟಾಟಾ ಆಡಿಟೋರಿಯಂ, ನ್ಯಾಸ್ ಬೆಂಗಳೂರಿನಲ್ಲಿ ನಡೆಯಿತು.



ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆ ವಿನ್ಯಾಸ ಬದಲಾವಣೆ ಮತ್ತು ಉತ್ತೀರ್ಣಕ್ಕಾಗಿ ಆತಂರಿಕ ಅಂಕಗಳನ್ನು ಪರಿಗಣಿಸುವ ಕುರಿತು ಸಮಾಜ ವಿಜ್ಞಾನ ವಿಷಯ ಶಿಕ್ಷಕರ ವೇದಿಕೆ ಕಲಬುರಗಿರವರ ಮನವಿ ಪತ್ರ.



ಶಿಕ್ಷಕ ಸಮಾಚಾರ ಮಂಡಳಿಯ ಸದಸ್ಯರಾದ ನಂ ನಾಗಲಕ್ಷ್ಮಿಯವರ ಮನೆಯಲ್ಲಿ ದಸರಾ ಬೊಂಬೆ ಪ್ರದರ್ಶನ.



ಎಸ್‌ಎಸ್‌ಎಲ್‌ಸಿ ವಿಜ್ಞಾನ ಪ್ರಶ್ನೆ ಪತ್ರಿಕೆ ರಚನೆಯಲ್ಲಿ ಸೂಕ್ತ ಬದಲಾವಣೆಯ ಕುರಿತು ವಿಧಾನ ಪರಿಷತ್ ಸದಸ್ಯರು ಸಂಘದ ಪದಾಧಿಕಾರಿಗಳಿಂದ ಮಾನ್ಯ ಅಧ್ಯಕ್ಷರು ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿಗೆ ಮನವಿ.

MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-11-2024 Date of Posting 20th or 21st of every month Posted at Periodical Rate

## ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ನಿಯೋಗ ಮನವಿ

# ಖಾಲಿ ಹುದ್ದೆ ಭರ್ತಿಗೆ ಬೇಗ ಅನುಮತಿ ನೀಡಿ



ಹುಬ್ಬಳ್ಳಿ: ರಾಜ್ಯದ ಅನುದಾನಿತ ಶಾಲಾ, ಕಾಲೇಜುಗಳಲ್ಲಿ 2015ರ ನಂತರ ಖಾಲಿ ಆಗಿರುವ ಹುದ್ದೆಗಳ ಭರ್ತಿ ಮಾಡಲು ಆಡಳಿತ ಮಂಡಳಿಗೆ ಅನುಮತಿ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ (ಕೆಆರ್‌ಎಂಎಸ್‌ಎಸ್) ನಿಯೋಗದ ಸದಸ್ಯರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಧಾರವಾಡದಲ್ಲಿ ಮಂಗಳವಾರ ಮನವಿ ಸಲ್ಲಿಸಿದರು.

ಅನುದಾನಿತ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ನಿಧನ, ಇತ್ಯಾದಿ ಕಾರಣಗಳಿಂದ ತೆರವಾದ ಹುದ್ದೆಗಳ ಭರ್ತಿಗೆ ಅನಮತಿ ನೀಡಬೇಕು. 1995ರ ನಂತರ ಪ್ರಾರಂಭವಾಗಿರುವ ಕನ್ನಡ ಮಾಧ್ಯಮ ಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಬೇಕು. ಅನುದಾನಿತ ಶಿಕ್ಷಕರಿಗೆ ಜ್ಯೋತಿ ಸಂಜೀವಿನಿ ವಿಮಾ ಸೌಲಭ್ಯ ಒದಗಿಸಬೇಕು. ಕಾಲ್ಪನಿಕ ವೇತನ ಜಾರಿ ಮಾಡಬೇಕು. 2006ರ ನಂತರ ಅನುದಾನಕ್ಕೊಳಪಟ್ಟ ಶಿಕ್ಷಕರಿಗೆ ಹಳೆಯ ಪಿಂಚಣಿ ಅನುಷ್ಠಾನ ಮಾಡಬೇಕು. ಏಳನೇ ವೇತನ ಆಯೋಗ ಜಾರಿಗೊಳಿಸಬೇಕು. ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆ ಭರ್ತಿಗೆ ಈ ಹಿಂದಿನ ಆದೇಶದಂತೆ ವಿದ್ಯಾರ್ಥಿಗಳ ಮಿತಿಯನ್ನು 120ಕ್ಕೆ ನಿಗದಿಪಡಿಸಿ ಆದೇಶ ಹೊರಡಿಸಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ನಿಯೋಗದ ಮನವಿ ಸ್ವೀಕರಿಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಸಹಮತ ವ್ಯಕ್ತಪಡಿಸಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ನಿಯೋಗದ ಸದಸ್ಯರು ತಿಳಿಸಿದ್ದಾರೆ. ನಿಯೋಗದಲ್ಲಿ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷ ಸಂದೀಪ ಬೂದಿಹಾಳ, ರಾಜ್ಯ ಕಾರ್ಯದರ್ಶಿ ಶ್ರೀಧರ ಪಾಟೀಲ ಕುಲಕರ್ಣಿ, ಪ್ರಾಚಾರ್ಯ ವಿಠ್ಠಲ ವಾಗ್ಮೋಡೆ, ಡಿ. ಹನುಮಂತಪ್ಪ, ಲಿಂಗರಾಜ ಬೆಲ್ಲದ ಇತರರಿದ್ದರು.

---

ರಾಜ್ಯದ ಅನುದಾನಿತ ಶಾಲಾ, ಕಾಲೇಜುಗಳಲ್ಲಿ 2015ರ ನಂತರ ಖಾಲಿ ಆಗಿರುವ ಹುದ್ದೆಗಳ ಭರ್ತಿಗೆ ಅನುಮತಿ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ನಿಯೋಗ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಧಾರವಾಡದಲ್ಲಿ ಮಂಗಳವಾರ ಮನವಿ ಸಲ್ಲಿಸಿತು. ಕೆಆರ್‌ಎಂಎಸ್‌ಎಸ್ ಅಧ್ಯಕ್ಷ ಸಂದೀಪ ಬೂದಿಹಾಳ, ಶ್ರೀಧರ ಪಾಟೀಲ ಕುಲಕರ್ಣಿ, ವಿಠ್ಠಲ ವಾಗ್ಮೋಡೆ, ಡಿ. ಹನುಮಂತಪ್ಪ, ಲಿಂಗರಾಜ ಬೆಲ್ಲದ ಇತರರಿದ್ದರು.

---



ಅಖಿಲ ಕರ್ನಾಟಕ ಪ್ರೌಢಶಾಲಾ ವಿಜ್ಞಾನ ಶಿಕ್ಷಕರ ವೇದಿಕೆ ವತಿಯಿಂದ ಧಾರವಾಡದಲ್ಲಿ ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪನವರನ್ನು ಭೇಟಿಯಾಗಿ "ಎಸ್‌ಎಸ್‌ಎಲ್‌ಸಿ ವಿಜ್ಞಾನ ಪ್ರಶ್ನೆ ಪತ್ರಿಕೆ ವಿನ್ಯಾಸ ಮತ್ತು ರಚನೆಯಲ್ಲಿ ವಿದ್ಯಾರ್ಥಿ ಸ್ನೇಹಿಯಾದ ಪ್ರಶ್ನೆ ಪತ್ರಿಕೆಯಲ್ಲಿ ಸೂಕ್ತ ಬದಲಾವಣೆಗೆ ಒತ್ತಾಯಿಸಿ ಸಚಿವರಿಗೆ ಮನವಿ ಸಲ್ಲಿಸಲಾಯಿತು. ವೇದಿಕೆ ರಾಜ್ಯ ಅಧ್ಯಕ್ಷರಾದ ಶ್ರೀಧರ ಪಾಟೀಲ ಕುಲಕರ್ಣಿ, ಶಿಕ್ಷಕ ಸಂಘದ ರಾಷ್ಟ್ರೀಯ ಕಾರ್ಯಾಧ್ಯಕ್ಷರಾದ ಶ್ರೀ ಬಸವರಾಜ ಗುರಿಕಾರ ಸರ್, ಮತ್ತು ವೇದಿಕೆ ಪದಾಧಿಕಾರಿಗಳಾದ ವಿ ಎಸ್ ಹುದ್ದಾರ, ಸಂಜೀವಕುಮಾರ ಬುಶೆಟ್ಟಿ, ಡಿ. ಬಿ. ದೊಡ್ಡಮನಿ, ಪ್ರಮೋದ ವಾದಿರಾಜ, ಆರ್ ಹೆಚ್ ಕುಂದರಗಿ, ಶ್ರೀಮತಿ ಪ್ರತಿಭಾ ಹೂಗಾರ, ಶ್ರೀಮತಿ ವಿ. ಡಿ. ಹೂಗಾರ, ಎಸ್. ವಿ. ಸಂಟಿ, ಶ್ರೀಮತಿ ದೀಪಾ ನಾಯಕ್, ಸಿ. ಎಂ. ಲಾಲಣ್ಣವರ್, ಎಲ್ ಎಂ ಪೀರ್ಜಾದೆ, ಶ್ರೀಮತಿ ವಿ. ಡಿ. ಸಿಂಚನಾ ಮೇಡಂ ನಿಯೋಗದಲ್ಲಿದ್ದರು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com